# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES KANNADA DAILY NEWS PAPER

PRGI NO : KNKAN/26/A0482

ಸಂಪಾದಕರು: ಆನಂದಯ್ಯ ವಿರಕ್ತಮಠ | ಸಂಪುಟ: 01 ಸಂಚಿಕೆ: 10 ಪುಟಗಳು: 04 ಬೆಲೆ: 02 ರೂ. ದಿನಾಂಕ: 25-06-2026 ಗುರುವಾರ | 73536 56555


**ಜನಶ್ರೀವಾಣಿ**

ಗೌರವ ಎಂಬುದು ಕೇವಲ ಮೂರು ಅಕ್ಷರದ ಪದವಲ್ಲ. ಮನುಷ್ಯನ ವ್ಯಕ್ತಿತ್ವದ ಅಸ್ಮಿತೆ ಗೌರವವಿಲ್ಲದ ಬದುಕು ಏನೆಲ್ಲವೂ ಇದ್ದು, ಏನಿಲ್ಲದಂತೆ.

■ ಆನಂದಯ್ಯ ವಿರಕ್ತಮಠ
ಸಂಪಾದಕರು: ಜನಶ್ರೀ ಟೈಮ್ಸ್

## ಕಪ್ಪತ್ತಗುಡ್ಡದಲ್ಲಿ ಕೃಷಿಪರ ಸಮ್ಮೇಳನ ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ: ರುದ್ರಣ್ಣ ಗುಳಗುಳಿ



ಶಿರಹಟ್ಟಿ: ತಾಲೂಕಿನ ಕಪ್ಪತ್ತಗುಡ್ಡದ ದೇವರಡ್ಡಿ ಅಗಸನಕೊಪ್ಪ ಅವರ ಹೊಲದಲ್ಲಿ ದಿನಾಂಕ 26-06-2026 ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಗೋವು ಆಧಾರಿತ, ನಂದಿ ಆಧಾರಿತ ಹಾಗೂ ಕೃಷಿಪರ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ನೆರವೇರಿಸುವರು ಎಂದು ಪರಿಸರ ಪ್ರೇಮಿ ರುದ್ರಣ್ಣ ಗುಳಗುಳಿ ಹೇಳಿದರು.

ಅವರು ಬುಧವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಏರ್ಪಡಿಸಿದ ಕೃಷಿಪರ ಸಮ್ಮೇಳನದ ಪೂರ್ವಭಾವಿ ಸಭೆಯನ್ನು ಹಾಗೂ ಕರಪತ್ರವನ್ನು ಬಿಡುಗಡೆ ಮಾಡಿ ಮಾತನಾಡುತ್ತಾ, ಶ್ರೀ ಅಧೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ಅಂದಾಜು 700 ಎಕರೆ ಜಮೀನಿನಲ್ಲಿ ಸಾವಯವ ಗೊಬ್ಬರಗಳನ್ನು ಬಳಸುವದರ ಮೂಲಕ ದೇಶಕ್ಕೆ ಮಾದರಿಯಾಗಿದ್ದಾರೆ. ರಾಸಾಯನಿಕ ಗೊಬ್ಬರ ಬಳಸುವದ-ರಿಂದ ವಿಷಪೂರಿತ ಆಹಾರ ಸೇವನೆ ಮಾಡುತ್ತಿದ್ದೇವೆ. ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದ ತರಕಾರಿ ಹಾಗೂ ಆಹಾರಧಾನ್ಯ ಸೇವಿಸುವ ಮೂಲಕ ಸದೃಢ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ. ಈ ಕಾರ್ಯಕ್ರಮದಲ್ಲಿ 500-600 ಜನ ರೈತರು ಸೇರುವ ಸಾಧ್ಯತೆಯಿದೆ. ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಿ, ಇದರ ಸದುಪಯೋಗ ಪಡೆದುಕೊಳ್ಳಿ ಎಂದರು. ಈ ಸಂದರ್ಭದಲ್ಲಿ ವೀರಣ್ಣ ಮಜ್ಜಗಿ, ಶ್ರೀಧರ ಹಮ್ಮಿಗಿ, ದೇವರಡ್ಡಿ ಅಗಸನಕೊಪ್ಪ, ಶರಣಪ್ಪ ಹರ್ಲಾಪೂರ, ಶಶಿಧರ ರಾನಡೆ ಹಾಗೂ ಅಡಿವೆಪ್ಪ ಅಡರಕಟ್ಟಿ ಉಪಸ್ಥಿತರಿದ್ದರು.

## ತ್ರಿವಿಧ ದಾಸೋಹ ಸೇವೆಗೆ ದಾನಿಗಳ ಕೊಡುಗೆ ಅತ್ಯಮೂಲ್ಯ: ಹೂವಿನಶಿಗ್ಲಿ ಶ್ರೀ ಚನ್ನವೀರ ಮಹಾಸ್ವಾಮಿಗಳು



ಲಕ್ಷ್ಮೇಶ್ವರ: ಮಠ-ಮಾನ್ಯಗಳು, ಗುರುಕುಲಗಳು ನಡೆಸುವ ಅನ್ನ, ಅಕ್ಷರ ಮತ್ತು ಅಶ್ರಯದ ತ್ರಿವಿಧ ದಾಸೋಹ ಸೇವೆ ನಿರಂತರವಾಗಿ ಸಾಗಲು ದಾನಿಗಳ ಕೊಡುಗೆ ಅತ್ಯಮೂಲ್ಯವಾಗಿದೆ ಎಂದು ಹೂವಿನಶಿಗ್ಲಿ ಶ್ರೀ ಚನ್ನವೀರ ಮಹಾಸ್ವಾಮಿಗಳು ಹೇಳಿದರು.

ಅವರು ಬುಧವಾರ ಸಮೀಪದ ಹೂವಿನಶಿಗ್ಲಿ ಮಠದ ಗುರುಕುಲದ ಮಕ್ಕಳ ನಿತ್ಯದ ದಾಸೋಹಕ್ಕಾಗಿ ಪ್ರತಿ 6 ತಿಂಗಳಿಗೊಮ್ಮೆ ಸಕಲ ದಿನಸಿ ಪದಾರ್ಥಗಳನ್ನು ಸ್ವತಃ ತಂದು ತಲುಪಿಸುವ ಕಲಬುರಗಿ ಜಿಲ್ಲೆಯ ಸೋನಾಳದ ವಿಜಯಕುಮಾರ ಬಿರಾದಾರ ಅವರಿಗೆ ಗುರುಕುಲ ಹಾಗೂ ಗ್ರಾಮಸ್ಥರಿಂದ ಹಮ್ಮಿಕೊಂಡಿದ್ದ ಸತ್ಕಾರ ಸಮಾರಂಭದ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು. ಸರ್ಕಾರದ ಅನುದಾನವಿಲ್ಲದೆ ಗುರುಕುಲದ ನೂರಾರು ಮಕ್ಕಳಿಗೆ ತ್ರಿವಿಧ ದಾಸೋಹ ಸೇವೆ ನೀಡುವುದು ಸವಾಲಿನ ಕೆಲಸವಾಗಿದೆ. ಗ್ರಾಮಸ್ಥರು ಹಾಗೂ ಭಕ್ತರ ಸಹಕಾರ ಇದ್ದರೂ ವಿಜಯಕುಮಾರ ಬಿರಾದಾರ ಅವರಂತಹ ದಾನಿಗಳ ನೆರವಿನಿಂದಲೇ ಗುರುಕುಲದ ಸೇವಾ ಪರಂಪರೆ ನಿರಂತರವಾಗಿ ಸಾಗುತ್ತಿದೆ. ಸಮಾಜದಲ್ಲಿ ದಾನಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಹಲವು ವರ್ಷಗಳಿಂದ ಪ್ರತಿ ಆರು ತಿಂಗಳಿಗೊಮ್ಮೆ ಲಕ್ಷಾಂತರ ರೂ ಮೌಲ್ಯದ ದಿನಸಿ ಸಾಮಗ್ರಿಗಳನ್ನು ತಂದು ಕೊಡುತ್ತಿರುವ ಕಲಬುರಗಿ ಜಿಲ್ಲೆಯ ಸೋನಾಳ ಗ್ರಾಮದ ಉದ್ಯಮಿ ವಿಜಯಕುಮಾರ ಸೂರ್ಯಕಾಂತ ಬಿರಾದಾರ ಅವರ ಸೇವೆ ಸಮಾಜಕ್ಕೆ ಮಾದರಿಯಾಗಿದೆ. ಅವರ ಈ ನಿಸ್ವಾರ್ಥ, ಪುಣ್ಯದ ಸೇವೆಗೆ ಶ್ರೀಮಠದ ಆಶೀರ್ವಾದ ಮತ್ತು ಮಕ್ಕಳ ಶುಭ ಹಾರೈಕೆಯಿದ್ದು ಭಗವಂತ ಅವರಿಗೆ ಇನ್ನಷ್ಟು ಸಂಪತ್ತು ಶಕ್ತಿ ನೀಡಲಿ ಎಂದು ಹಾರೈಸಿದರು. ತಹಸೀಲ್ದಾರ ರವಿ ಕೊರಕನವರ ಮಾತನಾಡಿ, ಗುರುಕುಲ ಶಿಕ್ಷಣ ಪದ್ಧತಿ ಮರೆಯಾಗುತ್ತಿರುವ ಸಂದರ್ಭದಲ್ಲಿ ಹೂವಿನಶಿಗ್ಲಿ ಮಠವು ಅನಾಥ ಹಾಗೂ ಬಡ ಮಕ್ಕಳಿಗೆ ಸುಶಿಕ್ಷಣ ಮತ್ತು ಸುಸಂಸ್ಕಾರ ನೀಡುವ ಮಹತ್ವದ ಕಾರ್ಯ ನಿರ್ವಹಿಸುತ್ತಿದೆ. ಮಠದಲ್ಲಿನ ನೂರಾರು ಮಕ್ಕಳ ದಾಸೋಹಕ್ಕಾಗಿ ವಿಜಯಕುಮಾರ ಬಿರಾದಾರ ಹಲವು ವರ್ಷಗಳಿಂದ ಲಕ್ಷಾಂತರ ರೂ ಬೆಲೆಯ ಗುಣಮಟ್ಟದ ದಿನಸಿ ಸಾಮಗ್ರಿಗಳನ್ನು ದೇಣಿಗೆಯಾಗಿ ನೀಡುವ ಮೂಲಕ ಗುರುಕುಲದ ಸೇವಾ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತಿರುವುದು ಶ್ಲಾಘನೀಯ ಎಂದರು. ಗುರುಕುಲದ ಆಡಳಿತಾಧಿಕಾರಿ ಆರ್.ಜಿ. ಚಿಕ್ಕಮಠ ಮಾತನಾಡಿ, ಹರ ಮುನಿದರೂ ಗುರುಕಾಯುವರು ಎಂಬಂತೆ ಲಿಂ.ನಿರಂಜನ ಜಗದ್ಗುರುಗಳ ಆಶೀರ್ವಾದಿಂದ ವಿಜಯಕುಮಾರ ಅವರಂತಹ ಪರಮ ಶ್ರೇಷ್ಠ ಭಕ್ತರು, ದಾನಿಗಳಿಂದ ಮಠದಲ್ಲಿ ಅನಾಥ, ಬಡ ಮಕ್ಕಳ ಸೇವೆ ಮಾಡಲು ಸಾಧ್ಯವಾಗುತ್ತಿದೆ ಎಂದರು. ಸತ್ಕಾರ ಸ್ವೀಕರಿಸಿ ಮಾತನಾಡಿದ ವಿಜಯಕುಮಾರ ಎಸ್. ಬಿರಾದಾರ, ಮಕ್ಕಳ ಸೇವೆಯೇ ದೇವರ ಸೇವೆ ಎಂಬ ನಂಬಿಕೆಯಿಂದ ಈ ಕಾರ್ಯದಲ್ಲಿ ತೊಡಗಿದ್ದೇನೆ. ಶ್ರೀಮಠವು ಬಡ ಅನಾಥ ಮಕ್ಕಳಿಗಾಗಿ ಮಾಡುತ್ತಿರುವ ಸೇವೆಗೆ ತಮ್ಮದೊಂದು ಅಳಿಲು ಸೇವೆ. ಈ ಸೇವೆಯಲ್ಲಿ ಪಾಲ್ಗೊಳ್ಳುವುದು ಆತ್ಮಸಂತೃಪ್ತಿ ತಂದಿದೆ ಹಾಗೂ ಈ ಸೇವೆ ಇನ್ನಷ್ಟು ವಿಸ್ತರಿಸಲು ದೇವರು ಶಕ್ತಿ ನೀಡಲಿ. ಗುರುಕುಲದ ಮಕ್ಕಳು ಉತ್ತಮ ನಾಗರಿಕರಾಗಿ ನಾಡಿನ ಬೆಳಕಾಗಲಿ ಎಂಬುದು ನನ್ನ ಆಶಯ ಎಂದು ಹೇಳಿದರು. ಈ ಸಂದರ್ಭದಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸುಭಾಷ್ ಮಜ್ಜಗಿ, ರಾಜು ಚಂದರವಾಡ, ಧನರಾಜ ರಾಜಮನೆ, ಎಸ್.ಎಸ್. ಮೈನಾಲೆ, ಬಿ.ಬಿ. ಹೆಡೆ, ಮಹಾದೇವ ಬಿರಾದಾರ, ಮನೋಜ ಹಿರೇಮಠ, ಆಕಾಶ ಹೊನ್ನಿ, ಆರ್.ಬಿ. ಬನ್ನೂರ, ಚಂದ್ರಕಾಂತ ಘಾಟಗೆ, ಶೈಲಾ ಆದಿ, ಜಯಶ್ರೀ ಮೆಳ್ಳಿಗೇರಿ, ಯೋಗೇಂದ್ರ ಜಂಬಗಿ, ಗುರುಕುಲದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ಆರ್.ವಿ. ಬಡಿಗೇರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪೋಟೊ: 24-ಎಲ್‌ಎಕ್ಸ್‌ಆರ್-1 ಹೂವಿನಶಿಗ್ಲಿ ವಿರಕ್ತಮಠದ ಗುರುಕುಲದ ಅನಾಥ ಹಾಗೂ ಬಡ ಮಕ್ಕಳ ದಾಸೋಹ ಸೇವೆ ಮಾಡುವ ಬೀದರನ್ ಉದ್ಯಮ ವಿಜಯಕುಮಾರ ಬಿರಾದಾರ ಅವರನ್ನು ಶ್ರೀಮಠದ ಶ್ರೀಗಳು, ಭಕ್ತರು ಹಾಗೂ ಗುರುಕುಲದ ಮಕ್ಕಳು ಸನ್ಮಾನಿಸಿದರು.

ಪೋಟೊ: 24-ಎಲ್‌ಎಕ್ಸ್‌ಆರ್-1.ಎ: ಹೂವಿನಶಿಗ್ಲಿ ವಿರಕ್ತಮಠದ ಗುರುಕುಲದ ಅನಾಥ ಹಾಗೂ ಬಡ ಮಕ್ಕಳ ದಾಸೋಹ ಸೇವೆಗೆ ಲಕ್ಷಾಂತರ ರೂಗಳ ದಿನಸಿ ನೀಡಿರುವುದು.

# ಹಂಪಿ ಪ್ರವಾಸಿ ತಾಣಗಳ ಮೂಲಸೌಕರ್ಯ ಮೇಲ್ದರ್ಜೆಗೆ ತುಕಾರಾಮ್ ಭರವಸೆ

ವಿಜಯನಗರ: ವಿಶ್ವವಿಖ್ಯಾತ ಪ್ರವಾಸಿ ತಾಣ ಹಂಪಿಯ ಸ್ಮಾರಕಗಳ ರಕ್ಷಣೆ, ಪ್ರವಾಸಿಗರ ಮೂಲಸೌಕರ್ಯ ಹಾಗೂ ಕನ್ನಡ ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಸದ ಈ.ತುಕಾರಾಮ್ ಭರವಸೆ ನೀಡಿದರು.

ತಾಲೂಕಿನ ಕಮಲಾಪುರ ಪುರಾತತ್ವ ವಸ್ತು ಸಂಗ್ರಹಲಯಕ್ಕೆ ಬುಧವಾರ ಬೇಟಿ ನೀಡಿ ಹಂಪಿ ವೃತ್ತದ ವಿವಿಧ ಪ್ರದೇಶಗಳಿಗೆ ಸುದೀರ್ಘ ಪರಿಶೀಲನೆ ನಡೆಸಿದರು. ಪ್ರಮುಖವಾಗಿ ಕಮಲಾಪುರದ ಪುರಾತತ್ವ ವಸ್ತುಸಂಗ್ರಹಾಲಯ, ಮಹಾನವಮಿ ದಿಬ್ಬ, ಹಜಾರರಾಮ ದೇವಾಲಯ, ದಾನಾಯಕ ಆವರಣ ಹಾಗೂ ವಿರೂಪಾಕ್ಷ ದೇವಾಲಯಕ್ಕೆ ಭೇಟಿ ನೀಡಿ, ಪ್ರವಾಸಿಗರ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಂಸದರು ಆರಂಭದಲ್ಲಿ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿ ಹಂಪಿಯ ವಿಶ್ವ ಪಾರಂಪರಿಕ ಇತಿಹಾಸವನ್ನು ಬಿಂಬಿಸುವ ವಿಡಿಯೋ ಪ್ರದರ್ಶನ ವೀಕ್ಷಿಸಿದರು. ಪ್ರಸ್ತುತ ಇಂಗ್ಲಿಷ್‌ನಲ್ಲಿರುವ ಇತಿಹಾಸದ ವಿಡಿಯೋವನ್ನು ಸ್ಥಳೀಯ



ಹಾಗೂ ರಾಜ್ಯದ ಪ್ರವಾಸಿಗರ ಅನುಕೂಲಕ್ಕಾಗಿ ಕನ್ನಡ ಭಾಷೆಯಲ್ಲೂ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. ಹಂಪಿ ವೀಕ್ಷಣೆಗೆ ಪ್ರಸ್ತುತ ಚಾಲ್ತಿಯಲ್ಲಿರುವ ಕೇವಲ 1 ಓಪನ್ ಅಂಬಾರಿ ಬಸ್ ವ್ಯವಸ್ಥೆಯ ಜೊತೆಗೆ, ಪ್ರವಾಸಿಗರ ಒತ್ತಡ ನಿರ್ವಹಿಸಲು ಇನ್ನೂ 3 ಹೊಸ ಅಂಬಾರಿ ಬಸ್ ಒದಗಿಸುವುದಾಗಿ ಭರವಸೆ ನೀಡಿದರು.

ಹಂಪಿಯ ವಿವಿಧ ಐತಿಹಾಸಿಕ ಸ್ಮಾರಕಗಳ ಬಳಿ ಇರುವ ನಾಗರಿಕ ಸಮಸ್ಯೆಗಳ ಕುರಿತು ಸಂಸದ ತುಕಾರಾಂ ಅವರು ಮಾಹಿತಿ ಪಡೆದರು. ಮಹಾನವಮಿ ದಿಬ್ಬದ ವ್ಯಾಪತಿಯಲ್ಲಿ ಕುಡಿಯುವ ನೀರು ಮತ್ತು ಶೌಚಾಲಯದ ಗಂಭೀರ ಸಮಸ್ಯೆಯನ್ನು ಖುದ್ದಾಗಿ ಪರಿಶೀಲಿಸಿದ ಅವರು, ಶೀಘ್ರದಲ್ಲೇ ಸರಿಪಡಿಸುವುದಾಗಿ ತಿಳಿಸಿದರು. ಹಜಾರರಾಮ ದೇವಾಲಯ ಹಾಗೂ ದಾನಾಯಕ ಆವರಣ ಪ್ರದೇಶಗಳಿಗೂ ಭೇಟಿ ನೀಡಿ ಅಲ್ಲಿನ ಸ್ಥಳೀಯ ಸಮಸ್ಯೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ವಿರೂಪಾಕ್ಷ ದೇವಾಲಯದ ಮುಂಭಾಗದಲ್ಲಿರುವ ಕುಡಿಯುವ ನೀರು ಹಾಗೂ ಚರಂಡಿ ವ್ಯವಸ್ಥೆಯನ್ನು ಪ್ರವಾಸಿಗರಿಗೆ ಮತ್ತು ಭಕ್ತಾದಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅತ್ಯಂತ ವೇಗವಾಗಿ ದುರಸ್ತಿಗೊಳಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ ಸಂಸದರು, ಕುಲಪತಿಗಳು ಹಾಗೂ ಕುಲಸಚಿವರೊಂದಿಗೆ ಚರ್ಚಿಸಿದರು. ಈ ವೇಳೆ ವಿಶ್ವವಿದ್ಯಾಲಯ ಎದು-ರಿಸುತ್ತಿರುವ ಆರ್ಥಿಕ ಮುಗ್ಗಟ್ಟು ಹಾಗೂ ಬೋಧಕ ಸಿಬ್ಬಂದಿಯ ಕೊರತೆಯ ಬಗ್ಗೆ ಕುಲಪತಿಗಳು ಸಂಸದರ ಗಮನಕ್ಕೆ ತಂದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಂಸದರು, ಕನ್ನಡ ವಿಶ್ವವಿದ್ಯಾಲಯವು ನಾಡಿನ ಹೆಮ್ಮೆಯ ಸಂಸ್ಥೆಯಾಗಿದೆ. ಇಲ್ಲಿನ ಶೈಕ್ಷಣಿಕ ಹಿತದೃಷ್ಟಿಯಿಂದ ಶಿಕ್ಷಕರ ನೇಮಕಾತಿಗೆ ಮೊದಲ ಆದ್ಯತೆ ನೀಡಲಾಗುವುದು. ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ವಿಶೇಷ ಅನುದಾನ ಶೀಘ್ರದಲ್ಲೇ ಬಿಡುಗಡೆ ಮಾಡಿಸುವ ಕುರಿತು ಮುಖ್ಯಮಂತ್ರಿಗಳೊಂದಿಗೆ ಖುದ್ದಾಗಿ ಚರ್ಚಿಸಿ ಸೂಕ್ತ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

# ಮಾಹಿತಿ ನೀಡದ ಅಧಿಕಾರಿಗಳಿಗೆ 25 ಸಾವಿರ ರೂಪಾಯಿ ದಂಡ

ಗದಗ: ಕರ್ನಾಟಕ ಮಾಹಿತಿ ಆಯೋಗದ ಬೆಳಗಾವಿ ಪೀಠದಲ್ಲಿ ಪ್ರತಿದಿನ ಸುಮಾರು 60 ರಿಂದ 100 ಅರ್ಜಿಗಳ ವಿಚಾರಣೆಯು ಆಫ್ಲೈನ್ ಮತ್ತು ಆನ್ಲೈನ್ ಮಾದರಿಯಲ್ಲಿ ನಡೆಯುತ್ತಿದೆ. ಮಾಹಿತಿ ಹಕ್ಕು ಅಧಿನಿಯಮದಡಿ ಸಾರ್ವಜನಿಕರು ಕೇಳಿದ ಮಾಹಿತಿಯನ್ನು ನೀಡದೆ ಸತಾಯಿಸುವ ಅಧಿಕಾರಿಗಳ ವಿರುದ್ಧ ಆಯೋಗವು ಕಠಿಣ ಕ್ರಮ ಕೈಗೊಳ್ಳಲಾಗುವುದು.

ಮಾಹಿತಿ ಹಕ್ಕು ಕಾಯ್ದೆಯು ಜನಪರ ಮತ್ತು ಪ್ರಜಾಪ್ರಭುತ್ವದ ಭದ್ರ ಬುನಾದಿಯಾಗಿದೆ. ಸ್ವತಂತ್ರ ಭಾರತದಲ್ಲಿ ಸಾಮಾನ್ಯ ಜನರಿಗೆ ಸರ್ಕಾರದ ಮಾಹಿತಿ ಸುಲಭವಾಗಿ ತಲುಪಬೇಕು ಎಂಬ ಉದ್ದೇಶ ಹೊಂದಿರುವ ಇದು ಅತ್ಯಂತ ಕ್ರಾಂತಿಕಾರಕ ಕಾಯ್ದೆಯಾಗಿದೆ. ಮಾಹಿತಿಯನ್ನು ಸಾಮಾನ್ಯ ಜನ-ರಿಗೆ ನೀಡದಿರುವುದು, ಆಯೋಗದ ವಿಚಾರಣೆಗೆ ಗೈರು ಹಾಜರಾಗುವುದು ಹಾಗೂ ಆಯೋಗ ನೀಡುವ ನೋಟಿಸ್ಗಳಿಗೆ ಸ್ಪಂದಿಸದಿರುವ ವಿವಿಧ ಇಲಾಖೆಗಳ ಅಧಿಕಾರಿಗಳ ವಿರುದ್ಧ ಕಟ್ಟು ನಿಟ್ಟಿನ ಕ್ರಮ ಜರುಗಿಸಲಾಗುತ್ತದೆ. ಕರ್ತವ್ಯ ಲೋಪ ಎಸಗುವ ಅಧಿಕಾ-ರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ವಿಚಾರಣಾ ಸಮಿತಿಗೆ ಶಿಫಾರಸು ಮಾಡುವುದರ ಜೊತೆಗೆ, ರೂ. 25,000/- ದವರೆಗೆ ದಂಡ ಹಾಗೂ ಅರ್ಜಿದಾರರಿಗೆ ಸೂಕ್ತ ಪರಿಹಾರ ನೀಡುವ ಆದೇಶಗಳನ್ನು ಆಯೋಗವು ಹೊರಡಿಸಲಾಗುವುದು ಎಂದು ಕರ್ನಾಟಕ ಮಾಹಿತಿ ಆಯೋಗದ ಬೆಳಗಾವಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಪ್ರಕಾಶ ನಾರಾಯಣ ಚನ್ನಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೂನ್ 25ರಿಂದ ಜೂನ್ 27ರ ಬೆಳಿಗ್ಗೆ 06 ಗಂಟೆವರೆಗೆ ರಾಯಚೂರು ಜಿಲ್ಲೆಯಾದ್ಯಂತ ಮಧ್ಯ ಮಾರಾಟ ಬಂದ್ : ಜಿಲ್ಲಾಧಿಕಾರಿ ಪೂವಿತಾ



ರಾಯಚೂರು: ರಾಯಚೂರು ಜಿಲ್ಲೆಯಾದ್ಯಂತ ಮೊಹರಂ ಹಬ್ಬದ ಸಮಯದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಹಾಗೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಜೂನ್ 25ರ ಬೆಳಿಗ್ಗೆ 06ಗಂಟೆಯಿಂದ ಜೂನ್ 27ರ ಬೆಳಿಗ್ಗೆ 06 ಗಂಟೆವರೆಗೆ ಅಬಕಾರಿ ಕಾಯ್ದೆ 1965ರ ಕಲಂ 21 (1) ರನ್ವಯ ರಾಯಚೂರು ಜಿಲ್ಲೆಯಾದ್ಯಂತ ಎಲ್ಲ ರೀತಿಯ ಮಧ್ಯ ತಯಾರಿಕಾ ಘಟಕಗಳು ಹಾಗೂ ಸಾಗಾಣಿಕೆ ಮತ್ತು ಸಂಗ್ರಹಣೆಯನ್ನು/ ಮಾರಾಟ ಅಂಗಡಿಗಳನ್ನು ಬಂದ್ ಮಾಡುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾ-ರಿಗಳಾದ ಪೂವಿತಾ ಎಸ್. ಅವರು ಆದೇಶ ಹೊರಡಿಸಿದ್ದಾರೆ.

**ಗುರ್ಜಿ... ಗುರ್ಜಿ... ಎಲ್ಲಾಡಿ ಬಂದೆ... ಹಳ್ಳ-ಕೊಳ್ಳ ತಿರುಗಾಡಿ ಬಂದೆ...**

# ಮಳೆರಾಯನ ಮೊರೆ ಹೋದ ಅಬ್ಬಿಗೇರಿಯ ಮಹಿಳೆಯರು

ನರೇಗಲ್ಲ: ಉತ್ತರ ಕರ್ನಾಟಕದ ಗ್ರಾಮೀಣ ಬದುಕಿನಲ್ಲಿ ಮಳೆ ಎಂದರೆ ಕೇವಲ ಹವಾಮಾನವಲ್ಲ; ಅದು ಬದುಕಿನ ಉಸಿರು. ರೈತನಿಗೆ ಮಳೆ ಎಂದರೆ ಬೆಳೆ, ಬೆಳೆ ಎಂದರೆ ಬದುಕು. ಆ ಬದುಕಿನ ಭರವಸೆ ಕೈತಪ್ಪುವ ಭಯ ಎದುರಾದಾಗ ಗ್ರಾಮೀಣರು ಇಂದಿಗೂ ತಮ್ಮ ಪಾರಂಪರಿಕ ಆಚರಣೆಗಳ ಮೊರೆ ಹೋಗುತ್ತಾರೆ.

ಅಂತಹ ಅಪರೂಪದ ಜನಪದ ಸಂಪ್ರದಾಯವೊಂದಕ್ಕೆ ಸೋಮವಾರ ಅಬ್ಬಿಗೇರಿ ಗ್ರಾಮ ಸಾಕ್ಷಿಯಾಯಿತು. "ಗುರ್ಜಿ... ಗುರ್ಜಿ... ಎಲ್ಲಾಡಿ ಬಂದೆ... ಹಳ್ಳ-ಕೊಳ್ಳ ತಿರುಗಾಡಿ ಬಂದೆ... ಕಾರ ಮಳೆಯೇ, ಕಪ್ಪತ್ತ ಮಳೆಯೇ... ಬಣ್ಣ ಕೊಡತಿನಿ ಬಾ ಮಳೆಯೇ... ಸುಣ್ಣ ಕೊಡತಿನಿ ಸುರಿಮಳೆಯೇ..." ಎಂಬ ಜನಪದ ಗೀತೆಯ ನಾದಗಳು ಗ್ರಾಮದ ಗೌಡ್ರ ಓಣಿಯಲ್ಲಿ ಪ್ರತಿ-ಧ್ವನಿಸುತ್ತಿದ್ದವು. ಆ ಹಾಡಿನಲ್ಲಿ ಮಳೆಯ ಮೇಲಿನ ಭರವಸೆ, ರೈತರ ಆತಂಕ ಮತ್ತು ಪ್ರಕೃತಿಯೊಂದಿಗೆ ಬೆಸೆದುಕೊಂಡ ಬದುಕಿನ ಕಥೆಯೇ ಅಡಗಿತ್ತು. ಕಳೆದ ಕೆಲವು ವರ್ಷಗಳಿಂದ ಹವಾಮಾನ ವೈಪ-ರೀತ್ಯಗಳು ರೈತರ ಬದುಕನ್ನು ಸಂಕಷ್ಟಕ್ಕೆ ತಳ್ಳುತ್ತಿವೆ. ಈ ವರ್ಷವೂ ಮುಂಗಾರು ಆರಂಭದಲ್ಲಿ ಸು-ರಿದ ಒಂದೆರಡು ಉತ್ತಮ ಮಳೆಗಳಿಗೆ ನಂಬಿಕೆ ಇಟ್ಟುಕೊಂಡು ರೈತರು ಶೇಂಗಾ, ತೊಗರಿ, ಹೆಸರು, ಗೋವಿನ ಜೋಳ, ಸೂರ್ಯಕಾಂತಿ ಸೇರಿದಂತೆ ವಿವಿಧ ಬೆಳೆಗಳ ಬಿತ್ತನೆ ಮುಗಿಸಿದ್ದರು. ಆದರೆ ನಂತರ ಮಳೆ ಸಂಪೂರ್ಣ ಕೈಕೊಟ್ಟಿದೆ. ಹೊಲಗಳಲ್ಲಿ ಮೊಳಕೆಯೊಡೆದ ಬೀಜಗಳು ನೀರಿಗಾಗಿ ಕಾಯುತ್ತಿವೆ. ಮಣ್ಣು ಒಣಗುತ್ತಿದೆ. ದಿನದಿಂದ ದಿನಕ್ಕೆ ರೈತರ ಚಿಂತೆ ಹೆಚ್ಚಾಗುತ್ತಿದೆ. ಇಂತಹ ಸಂದರ್ಭದಲ್ಲಿ ಗ್ರಾಮದ ಮಹಿಳೆಯರು ತಲೆಮಾರುಗಳಿಂದ ಆಚರಿಸಿಕೊಂಡು ಬಂದಿರುವ ಗುರ್ಜಿ ಪೂಜೆಯನ್ನು ನೆರವೇರಿಸಿದರು. ಬೆಳಗ್ಗೆಯಿಂದಲೇ ಮಹಿಳೆಯರು ಪೂಜೆಗೆ ಸಿದ್ಧತೆ



ನಡೆಸಿದರು. ಆಕಳ ಸಗಣಿಯಿಂದ ಗುರ್ಜಿ ಮೂರ್ತಿಯನ್ನು ತಯಾರಿಸಿ ರೊಟ್ಟಿ ಬೇಯಿಸುವ ತವಿಯ ಮೇಲೆ ಪ್ರತಿಷ್ಠಾಪಿಸಿದರು. ಅದರ ಮೇಲೆ ಹಸಿರು ಹುಲ್ಲು, ಕಾಡುಹೂವುಗಳು ಹಾಗೂ ಎಲೆಗಳಿಂದ ಅಲಂಕಾರ ಮಾಡಲಾಯಿತು. ನಂತರ ಮಹಿಳೆಯರು ಗುಂಪುಗಳಾಗಿ ಸೇರಿ ಹಾಡುಗಳನ್ನು ಹಾಡುತ್ತ ಗ್ರಾಮದ ಓಣಿ-ಓಣಿಗಳಲ್ಲಿ ಸಂಚರಿಸಿದರು. ಗುರ್ಜಿ ಪೂಜೆಯ ಸಂದರ್ಭದಲ್ಲಿ ಮಹಿಳೆಯರ ಧ್ವನಿಯಲ್ಲಿ ಕೇಳಿಬಂದ ಹಾಡುಗಳು ಕೇವಲ ಜನಪದ ಗೀತೆಗಳಲ್ಲ; ಅವು ರೈತರ ಮನದಾಳದ ಕೂಗು. "ಕಾರ ಮಳೆಯೇ, ಕಪ್ಪತ್ತ ಮಳೆಯೇ" ಎನ್ನುವ ಸಾಲುಗಳಲ್ಲಿ ರೈತನ ಬದುಕು ನೆಲೆಗೊಂಡಿದೆ. ಮಳೆ ಬಾರದಿದ್ದರೆ ಬೆಳೆ ಇಲ್ಲ, ಬೆಳೆ ಇಲ್ಲದಿದ್ದರೆ ಆದ-ಾಯ ಇಲ್ಲ, ಆದಾಯ ಇಲ್ಲದಿದ್ದರೆ ಕುಟುಂಬದ ನಿರ್ವಹಣೆಯೇ ಕಷ್ಟ ಎಂಬ ವಾಸ್ತವಿಕತೆಯನ್ನು ಈ ಹಾಡುಗಳು ಪ್ರತಿಬಿಂಬಿಸುತ್ತವೆ. ಪ್ರತಿ ಮನೆಯ ಮುಂದೆ ನಿಂತು ಮಹಿಳೆಯರು ಗುರ್ಜಿ ಹಾಡು ಹಾಡುತ್ತಿದ್ದಂತೆ ಮನೆಯವರು ಹೊರಬಂದು ನೀರು ಸುರಿದು ಪೂಜೆ ಸಲ್ಲಿಸಿದರು. ಇದು ಮಳೆಯ ಸಂಕೇತವೆಂದು ಪರಿಗಣಿಸಲಾಗುತ್ತದೆ. ಬಳಿಕ ಧಾನ್ಯ, ಜೋಳ, ರೊಟ್ಟಿ, ಪಲ್ಲೆ, ಪುಡಿಗಾಸು ಹಾಗೂ ಇತರ ದವಸಧಾನ್ಯಗಳನ್ನು ಸಮರ್ಪಿಸಲಾಯಿತು. ಗ್ರಾಮದ ಪ್ರತಿಯೊಂದು ಕುಟುಂಬವೂ ಈ ಆಚ-ರಣೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಗ್ರಾಮದ ಹಿರಿಯರ ಪ್ರಕಾರ, ದಶಕಗಳ



ಹಿಂದಿನಿಂದಲೂ ಮಳೆ ವಿಳಂಬವಾದ ಸಂದರ್ಭಗಳಲ್ಲಿ ಗುರ್ಜಿ ಪೂಜೆ ನಡೆಸುವ ಸಂಪ್ರದಾಯ ಇದೆ. "ಹಿರಿಯರು ಹೇಳ್ತಿದ್ರು, ಗುರ್ಜಿ ಊರು ಸುತ್ತಿದ್ಮೇಲೆ ಮಳೆ ಬರುತಿತ್ತು ಅಂತ. ಅದಕ್ಕೇ ಇವತ್ತಿಗೂ ಈ ಆಚರಣೆ ನಿಂತಿಲ್ಲ" ಎಂದು ಹಲವರು ನೆನಪಿಸಿಕೊಂಡರು. ಜನಪದ ತಜ್ಞರ ಅಭಿಪ್ರಾಯದಲ್ಲಿ, ಗುರ್ಜಿ ಪೂಜೆ ಕೇವಲ ಧಾರ್ಮಿಕ ಆಚರಣೆಯಲ್ಲ; ಅದು ಪ್ರಕೃತಿಯೊಂದಿಗೆ ಮಾನವನ ಸಂಬಂಧವನ್ನು ವ್ಯಕ್ತಪಡಿಸುವ ಸಾಂಸ್ಕೃತಿಕ ಆಚರಣೆ. ಮಳೆಯ ಮೇಲಿನ ಅವಲಂಬನೆ, ಸಮುದಾಯದ ಒಗ್ಗಟ್ಟು ಹಾಗೂ ಪರಿಸರದ ಬಗ್ಗೆ ಜನರಲ್ಲಿ ಇರುವ ಗೌರವವನ್ನು ಈ ಆಚರಣೆ ಪ್ರತಿಬಿಂಬಿಸುತ್ತದೆ. ಪೂಜೆಯ ನಂತರ ಸಂಗ್ರಹವಾದ ದವಸಧಾನ್ಯಗಳಿಂದ ಗೋಧಿ ಹುಗ್ಗಿ, ಜೋಳದ ಸಂಗಟಿ, ಸಾರು ಹಾಗೂ ಪಲ್ಲೆ ತಯಾರಿಸಲಾಯಿತು. ಗ್ರಾಮದ ಸಮೀಪದ ಹಳ್ಳದ ದಡದಲ್ಲಿ ವಿಶೇಷ ಪೂಜೆ ಸಲ್ಲಿಸಿ ಜಂಗಮರಾಧನೆ ನಡೆಸಲಾಯಿತು. ಬಳಿಕ ಗ್ರಾಮಸ್ಥರಿಗೆ ಅನ್ನಸಂತರ್ಪಣೆ ಮಾಡಿ ಮಳೆಗಾಗಿ ಸಮೂಹ ಪ್ರಾರ್ಥನೆ ಸಲ್ಲಿಸಲಾಯಿತು. ಪ್ರಸ್ತುತ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಬಿತ್ತನೆಗೆ ಸಾವಿರಾರು ರೂಪಾಯಿ ವೆಚ್ಚ ಮಾಡಿರುವ ರೈತರು ಸಾಲದ ಹೊರೆ ಹೊತ್ತಿದ್ದಾರೆ. ಮಳೆ ಬಾರದಿದ್ದರೆ ಮತ್ತೆ ಬಿತ್ತನೆ ಮಾಡಬೇಕಾಗುವ ಪರಿಸ್ಥಿತಿ ಎದುರಾಗಬಹುದು. "ಇನ್ನೂ ನಾಲ್ಕೈದು ದಿನಗಳಲ್ಲಿ ಮಳೆಯಾಗದಿದ್ದರೆ ಮೊಳಕೆ ಒಡೆದಿರುವ ಬೀಜಗಳು ಒಣಗಿ ಹೋಗುತ್ತವೆ. ಬೀಜ, ಗೊಬ್ಬರ, ಉಳುಮೆ, ಕೂಲಿ ಎಲ್ಲಕ್ಕೂ ಸಾಕಷ್ಟು ಖರ್ಚಾಗಿದೆ. ಮಳೆ ಕೈಕೊಟ್ಟರೆ ರೈತರಿಗೆ ದೊಡ್ಡ ಹೊಡೆತ ಬೀಳಲಿದೆ" ಎಂದು ರೈತ ಮಹಿಳೆಯರಾದ ಮಲ್ಲಮ್ಮ ಬೇಲೇರಿ, ಮಂಜ-ಕ್ಕ ಸೊಬರದ, ಶಿವಲೀಲಾ ಪಾಟೀಲ, ಸಂಗಮ್ಮ ಬಾಗೂರ, ಅಕ್ಕಮ್ಮ ಚನ್ನಪ್ಪಗೌಡ್ರ, ವೀಣಾ ಬೇಲೇರಿ ಹಾಗೂ ಕವಿತಾ ಕಿರಟಗೇರಿ ಆತಂಕ ವ್ಯಕ್ತಪಡಿಸಿದರು. ಇಂದು ವಿಜ್ಞಾನ ಚಂದ್ರನ ಮೇಲೆ ಕಾಲಿಟ್ಟಿದೆ. ಹವಾಮಾನ ಮುನ್ಸೂಚನೆಗಳು ದೊರೆಯುತ್ತಿವೆ. ಆಧುನಿಕ ಕೃಷಿ ವಿಧಾನಗಳು ಬೆಳೆಯುತ್ತಿವೆ. ಆದರೆ ಮಳೆಯ ವಿಷಯದಲ್ಲಿ ರೈತ ಇನ್ನೂ ಆಕಾಶವನ್ನೇ ನಂಬಬೇಕಾಗಿದೆ. ಮೋಡಗಳು ಕವಿದಾಗ ಅವನ ಮುಖದಲ್ಲಿ ನಗು ಮೂಡುತ್ತದೆ; ಮೋಡಗಳು ಕರಗಿ ಹೋದಾಗ ಕಣ್ಣಲ್ಲಿ ಆತಂಕ ಮನೆಮಾಡುತ್ತದೆ. ಅಬ್ಬಿಗೇರಿಯಲ್ಲಿ ನಡೆದ ಗುರ್ಜಿ ಪೂಜೆ ಕೇವಲ ಒಂದು ಗ್ರಾಮೀಣ ಆಚರಣೆಯಲ್ಲ. ಅದು ರೈತರ ಬದುಕಿನ ಹೋರಾಟದ ಸಂಕೇತ. ಪ್ರಕೃತಿಯೊಂದಿಗೆ ಬೆಸೆದುಕೊಂಡಿರುವ ಬದುಕಿನ ಅಭಿವ್ಯಕ್ತಿ. ಮಳೆಗಾಗಿ ಮೊರೆಯಿಡುವ ರೈತ ಮಹಿಳೆಯರ ಹಾಡಿನಲ್ಲಿ ಇಡೀ ಕೃಷಿ ಸಂಸ್ಕೃತಿಯ ನೋವು ಮತ್ತು ನಂಬಿಕೆ ಅಡಗಿದೆ. ಈಗ ಅಬ್ಬಿಗೇರಿ ಮಾತ್ರವಲ್ಲ, ಇಡೀ ನರೇಗಲ್ಲ ಹೋಬಳಿ ಹಾಗೂ ಉತ್ತರ ಕರ್ನಾಟಕದ ರೈತ ಕುಟುಂಬಗಳ ಕಣ್ಣುಗಳು ಆಕಾಶದತ್ತ ನೆಟ್ಟಿವೆ. ಅವರ ತುಟಿಗಳಲ್ಲಿ ಒಂದೇ ಪ್ರಾರ್ಥನೆ ಕೇಳಿಬರುತ್ತಿದೆ? "ಮಳೆರಾಯಾ... ನಮ್ಮ ಹೊಲಗಳಿಗೆ ಜೀವ ಕೊಡು... ನಮ್ಮ ಬೆಳೆಗಳನ್ನು ಉಳಿಸು... ನಮ್ಮ ಬದುಕಿಗೆ ಆಸರೆಯಾಗು..." ಚಿತ್ರ ಶೀರ್ಷಿಕೆ: ಅಬ್ಬಿಗೇರಿ ಗ್ರಾಮದ ಗೌಡ್ರ ಓಣಿಯಲ್ಲಿ ಮಳೆಗಾಗಿ ಸಾಂಪ್ರದಾಯಿಕ ಗುರ್ಜಿ ಪೂಜೆ ನೆರವೇರಿಸಿ ಜನಪದ ಗೀತೆಗಳನ್ನು ಹಾಡುತ್ತ ಗ್ರಾಮದಲ್ಲಿ ಸಂಚರಿಸುತ್ತಿರುವ ರೈತ ಮಹಿಳೆಯರು.

## ಮೊಹರಂ ಹಬ್ಬದ ಆಚರಣೆ ಪ್ರಯುಕ್ತ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿಗಳ ಆದೇಶ

ಕೊಪ್ಪಳ: ಜಿಲ್ಲೆಯಾದ್ಯಂತ ಮೊಹರಂ ಹಬ್ಬದ ಆಚ-'ರಣೆಯ ಪ್ರಯುಕ್ತ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಕಾನೂನು ಸುವ್ಯವಸ್ಥೆ, ಶಾಂತಿ ಪಾಲನೆಗಾಗಿ ಮತ್ತು ಸಾರ್ವಜನಿಕರ ಹಿತಾಸಕ್ತಿ ಕಾಪಾಡುವ ಹಿತದೃಷ್ಠಿಯಿಂದ ಕರ್ನಾಟಕ ಅಬಕಾರಿ ಕಾಯ್ದೆ-1965 ರ ಕಲಂ 21 ರನ್ವಯ ಜೂನ್ 25 ರ ಬೆಳಿಗ್ಗೆ 6 ಗಂಟೆಯಿಂದ ಜೂನ್ 26 ರ ರಾತ್ರಿ 11 ಗಂಟೆಯವರೆಗೆ ಕೊಪ್ಪಳ ಜಿಲ್ಲೆಯಾದ್ಯಂತ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾ-ರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ಡಾ.ಸುರೇಶ ಬಿ.ಇಟ್ನಾಳ ಅವರು ಆದೇಶ ಹೊರಡಿಸಿದ್ದಾರೆ.

ಆದೇಶದನ್ವಯ ಅಬಕಾರಿ ಉಪ ಆಯುಕ್ತರ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಿ, ಅದರಲ್ಲಿ ಆರಕ್ಷಕರ ವೃತ್ತ ನಿರೀಕ್ಷಕರು ಹಾಗೂ ಅಬಕಾರಿ ವೃತ್ತ ನಿರೀಕ್ಷಕರು ಕಾರ್ಯನಿರ್ವಹಿಸಲು ಸೂಚಿಸಿದೆ. ಆದೇಶವನ್ನು ಅನುಷ್ಠಾನಗೊಳಿಸುವಲ್ಲಿ ನಿರ್ಲಕ್ಷ ?ಯತನ ತೋರಿದವರ ವಿರುದ್ಧ ಕಾನೂನು ರೀತಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

## ಪ.ಪೂ.ಕಾಲೇಜುಗಳ ಜಿಲ್ಲಾ ಉಪನ್ಯಾಸಕರ ಸಂಘಕ್ಕೆ ಆಯ್ಕೆ

ಹಗರಿಬೊಮ್ಮನಹಳ್ಳಿ: ಪಟ್ಟಣದಲ್ಲಿ ಬುಧವಾರ ನಡೆದ ಕಾಲೇಜ್ ಉಪನ್ಯಾಸಕರ ಸಭೆಯಲ್ಲಿ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಜಿಲ್ಲಾ ಘಟಕಕ್ಕೆ ಪದಾಧಿಕಾರಿಗಳ ಆಯ್ಕೆಮಾಡಲಾಯಿತು.



ಗೂಳಪ್ಪ ಹುಲಿಮನಿ(ಜಿಲ್ಲಾಧ್ಯಕ್ಷ), ಜೆ.ಪ್ರದೀಪ ಕುಮಾರ (ಕಾರ್ಯಾಧ್ಯಕ್ಷ), ಕೆ.ಪಾರ್ವತಮ್ಮ (ಉಪಾಧ್ಯಕ್ಷ), ಎನ್. ವಿಜಯ ಭಾಸ್ಕರ್ (ಖಜಾಂಚಿ), ಎಚ್. ಎಂ.ನಿರಂಜನ (ಪ್ರಧಾನ ಕಾರ್ಯದರ್ಶಿ), ಜಿ.ಎಲ್.ವಾಗೀಶ್(ಪ್ರಧಾನ ಸಂಘಟನಾ ಕಾರ್ಯದರ್ಶಿ), ಡಿ.ಕಲ್ಲನಗೌಡರ ಪ್ರಕಾಶ್ (ಕಾರ್ಯದರ್ಶಿ), ಕೆ.ಎಂ.ರೇಣುಕಾ ಸ್ವಾಮಿ (ಜಂಟಿ ಕಾರ್ಯದರ್ಶಿ), ಶೋಭಾ(ಸಂಚಾಲಕ) ರವರನ್ನು ಆಯ್ಕೆಮಾಡಲಾಗಿದೆ ಎಂದು ನೂತನ ಅಧ್ಯಕ್ಷ ಗೂಳಪ್ಪ ಹುಲಿಮನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಹಾಯಧನಕ್ಕೆ ಅರ್ಜಿ ಆಹ್ವಾನ

ಹೊಸಪೇಟೆ: ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವಂತಿ-ಕೆ ಪಾವತಿಸುವ ಸಂಘಟಿತ ಕಾರ್ಮಿಕರ ಪ್ರೌಢಶಾಲೆಯಿಂದ ಸ್ನಾತಕೋತ್ತರ ಪದವಿಯರೆಗೆ ಹಾಗೂ ವೈದ್ಯಕೀಯ, ಇಂಜಿನಿಯ-ರಿಂಗ್ ನಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ 2026-27 ನೇ ಸಾಲಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು 2026 ಡಿಸೆಂಬರ್ 31 ಕೊನೆಯ ದಿನವಾಗಿದೆ. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ಬಯಸುವ ವಿದ್ಯಾರ್ಥಿಗಳು ಕಾರ್ಮಿಕ ಕಲ್ಯಾಣ ಮಂಡಳಿಯ ವೆಬ್‌ಸೈಟ್ www.klwbapps.karnataka.gov,in ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹಿಂದಿನ ವರ್ಷದಲ್ಲಿ ಸಾಮನ್ಯ ವರ್ಷದಲ್ಲಿ ಶೇ.50 ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶೇ.45 ರಷ್ಟು ಅಂಕ ಪಡೆದು ತೇರ್ಗಡಯಾಗಿರಬೇಕು. ಕಾರ್ಮಿಕನ ಮಾಸಿಕ ವೇತನ ರೂ.35,000 ಗಿಂತ ಮೀರಿರಬಾರದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 080-23475188, 8277291175, 8277120505, 9141585402, 9141602562 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ನಿರಂತರ ಶ್ರಮದಿಂದ ಶೈಕ್ಷಣಿಕ ಸಾಧನೆ ಸಾಧ್ಯ : ಎಸ್.ಎ ಶಿವರಾಜ್



ಹೂವಿನಹಡಗಲಿ: ನಿರಂತರ ಶ್ರಮಪಟ್ಟರೆ ಶೈಕ್ಷಣಿಕ ಸಾಧನೆ ಸಾಧ್ಯವಾಗುತ್ತದೆ ಎಂದು ಎಸ್ ಎಂ ಎನ್ ಫೌಂಡೇಶನ್ ನ ಅಧ್ಯಕ್ಷರಾದ ಎಸ್ ಎ ಶಿವರಾಜ್ ಅಭಿಪ್ರಾಯ ಪಟ್ಟರು.

ಪಟ್ಟಣದ 8ನೇವಾರ್ಡ್ ಸರಕಾರಿ ಶಾಲೆ ಮಕ್ಕಳಿಗೆ ಎಸ್ ಎಂ ಎನ್ ಫೌಂಡೇಶನ್ ನ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪ್ಲೇಟ್ ಹಾಗೂ ಲೋಟ ವಿತರಣೆಯ ಮಾಡಿ, ಮಾತನಾಡಿ. ಶೈಕ್ಷಣಿಕ ಸಾಧನೆಗೆ ಬಡವ ಶ್ರೀಮಂತ ಎನ್ನುವ ಭೇದವಿಲ್ಲ.ಶ್ರಮವಿದ್ದಲ್ಲಿ ಪ್ರತಿಫಲ ಇರುತ್ತದೆ. ನೀವೆಲ್ಲರೂ ವಿದ್ಯೆಯನ್ನ ಕಲಿತು ಸುಸಂಸ್ಕೃತ ನಾಗರೀಕರಾಗಿ ಎಂದು ಹೇಳಿದರು. ನಮ್ಮ ಫೌಂಡೇಶನ್ ವತಿಯಿಂದ ಶೈಕ್ಷಣಿಕ ಅಭಿವೃದ್ಧಿಗಾಗಿ ಅಳಿಲು ಸೇವೆ ಮಾಡಲು ಸದಾ ಸಿದ್ಧನಿರುವುದಾಗಿ ತಿಳಿಸಿದರು. ಶಾಲೆಯ ಮುಖ್ಯ ಶಿಕ್ಷಕರಾದ ವೀರಣ್ಣ ಮಠದ್ ಮಾತನಾಡಿ ಎಸ್ ಎಂ ಎನ್ ಫೌಂಡೇಶನ್ ನ ಹಲವು ವರ್ಷಗಳಿಂದ ಸರ್ಕಾರಿ ಕನ್ನಡ ಶಾಲೆಗಳ ಗೋಡೆಗಳಿಗೆ ಬಣ್ಣ ಬಳಿಯುವ ಮೂಲಕ ಮತ್ತು ಶೈಕ್ಷಣಿಕ ನೆರವು ನೀಡುವ ಮೂಲಕ ಅವುಗಳನ್ನು ಬೆಳಗಿಸಿಕೊಂಡು ಪುನರುಜ್ಜೀವನಗೊಳಿಸುತ್ತಾರೆ.ಅನೇಕ ಸಮಾಜಮುಖಿ ಸತ್ಕಾರ್ಯಗಳನ್ನು ಮಾಡಿಕೊಂಡು ಬಂದಿದೆ ಎಂದು ಸ್ಮರಿಸಿದರು.

# ಸ್ಮಾರ್ಟ್ ಮೀಟರ್ ಅಳವಡಿಕೆ ರೈತ ವಿರೋಧಿ ನೀತಿ : ಜಗನ್ನಾಥ ಆಕ್ರೋಶ

ಹಗರಿಬೊಮ್ಮನಹಳ್ಳಿ: ಇತ್ತೀಚಿನ ದಿನಗಳಲ್ಲಿ ಈ ದೇಶದ ಬೃಹತ್ ಟಾಟಾ ಕಂಪನಿಗೆ ವಿದ್ಯುತ್ ಇಲಾಖೆಯನ್ನು ಕೊಡುವುದರ ಮೂಲಕ ರಾಜ್ಯದ ರೈತರಿಗೆ ಸರಕಾರ ಘನಘೋರ ಅನ್ಯಾಯವನ್ನು ಮಾಡುತ್ತಿದೆ.

ಖಾಸಗಿ ಕಂಪನಿಗಳಲ್ಲಿ ಉದ್ಯೋಗಿಗಳಿಗೆ ಯಾವುದೇ ರೀತಿಯ ಭದ್ರತೆ ಇರುವುದಿಲ್ಲ, ಮೇಲಾಗಿ ಯಾವುದೇ ರೀತಿಯ ಸೌಲಭ್ಯಗಳು ಇರುವುದಿಲ್ಲ. ಉದ್ಯೋಗಿಗಳ ಪಾಡು ಈ ರೀತಿಯಾದರೆ, ರೈತರ ಪಾಡನ್ನಂತೂ ಯಾರೂ ಕೇಳುವವರಿಲ್ಲ ಎಂದು ತಾಲೂಕು ಸಿ ಐ ಟಿ ಯು ನ ಮುಖ್ಯಸ್ಥ ಜಗನ್ನಾಥ ಕಿಡಿಕಾ-ರಿದರು.

ಪಟ್ಟಣದ ಕೆಪಿಟಿಸಿಎಲ್ ಕಚೇರಿಯ ಮುಂಭಾಗ ಪ್ರತಿಭಟನೆಯಲ್ಲಿ ಮಾತನಾಡುತ್ತಾ.. ಮುಂದಿನ ದಿನಮಾನಗಳಲ್ಲಿ ರೈತರ ಬದುಕು ಮತ್ತಷ್ಟು ಘೋರವಾಗಲಿದ್ದು, ಈ ದೇಶದ




ರೈತನನ್ನು ಕಾಯುವವರು ಯಾರು...? ಎಂಬ ಕಟು ಸತ್ಯ ಜನರನ್ನು ಕಾಡುತ್ತಿದೆ. ಎಲ್ಲಾ ಇಲಾಖೆಗಳನ್ನು ಇದೇ ರೀತಿಯಾಗಿ ಖಾಸಗಿಕರಣ ಮಾಡುತ್ತಾ ಹೋದಲ್ಲಿ, ಸಾರ್ವಜನಿಕ ಆಸ್ತಿಪಾಸ್ತಿಗಳು ಸಾರ್ವಜನಿಕ ಜೀವನ ಎಲ್ಲವೂ ಖಾಸಗಿ ಮಯವಾಗಿ, ಮನುಷ್ಯನ ಬದುಕು ಶೋಷಿತರ ಕೈಗೆ ಸಿಕ್ಕು ವಿಲವಿಲ ಎಂದು ಒದ್ದಾಡುವ ಪರಿಸ್ಥಿತಿ ಬರುವ ದಿನಗಳು ದೂರವಿಲ್ಲ. ಆದ್ದರಿಂದ ಆಳುವ ಸರ್ಕಾರಗಳು ಕೂಡಲೇ ಎಚ್ಚೆತ್ತುಕೊಂಡು ಜೆಸ್ಕಾಂ, ಎಸ್ಕಾಂ, ಮೆಸ್ಕಾಂಗಳಲ್ಲಿ ರಾಜ್ಯಾದ್ಯಂತ ಇರುವ ಎಲ್ಲಾ ರೀತಿಯ ವಿದ್ಯುತ್ ಇಲಾಖೆಗಳಲ್ಲಿ ಕೆಲಸ ಮಾಡುವ ನೌಕರರ ಹಾಗೂ ನಮ್ಮ ರಾಜ್ಯದಲ್ಲಿರುವ 40 ಲಕ್ಷಕ್ಕೂ ಹೆಚ್ಚು ಇರುವ ಪಂಪ್ಸೆಟ್ಟುಗಳ ರೈತರ ಹಿತವನ್ನು ಕಾಪಾಡುವ ಜವಾಬ್ದಾರಿ ಸರಕಾರಗಳ ಮೇಲಿದೆ. ಇಲ್ಲದೆ ಹೋದಲ್ಲಿ ಮುಂದಿನ ದಿನಮಾನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಂಡು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಬೃಹತ್ ಪ್ರತಿಭಟನೆಯನ್ನು ಮಾಡಲಿದ್ದೇವೆ ಎಂದು ಸಿ ಐ ಟಿ ಪದಾಧಿಕಾ-ರಿಗಳು ತಮ್ಮ ಹಕ್ಕು ಒತ್ತಾಯ ಮಾಡಿದರು.

ಈ ಸಂದರ್ಭದಲ್ಲಿ ಕೆಪಿಟಿಸಿ-ಎಲ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ನಾಗರಾಜ್ ಸಿಪಿಐ ಆರ್ ಎಸ್ ಬಸವರಾಜ್ ಕೆಇಬಿ ಉದ್ಯೋಗಿಗಳು ಹಾಗೂ ಸಿಐಟಿಯು ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಸಮ ಸಮಾಜದ ನಿರ್ಮಾಣಕ್ಕೆ ಅನೇಕರ ಕೊಡುಗೆ ಇದೆ



ಹೂವಿನ ಹಡಗಲಿ: ತಾಲೂಕಿನ ಮಿರಕೋರನಹಳ್ಳಿ ಶ್ರೀ ಶರಣಬಸವೇಶ್ವರ ಪ್ರೌಢಶಾಲೆಯಲ್ಲಿ, ಸಾಮಾಜಿಕ ಮೌಲ್ಯಗಳು ಬದುಕಿಗೆ ದಾರಿದೀಪ ಎಂದು ಗವಿಮಠದ ಡಾ ಹಿರಿಶಾಂತವೀರ ಮಹಾಸ್ವಾಮಿಗಳು ಅಭಿಮತ ವ್ಯಕ್ತಪಡಿಸಿದರು.

ತಾಲೂಕಿನ ಮೀರಾಕೊರ್ನಹಳ್ಳಿ ಶರಣಬಸವೇಶ್ವರ ಸರಕಾರಿ ಪ್ರೌಢಶಾಲೆಯಲ್ಲಿ 2026-27 ನೇ ಸಾಲಿನಲ್ಲಿ ಮೌಲ್ಯ ಶಿಕ್ಷಣ ಸೇರಿಸಿದ ಪ್ರಯುಕ್ತ ಆ ವಿಷಯ ಕು-ರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇಂದಿನ ಸಮಾಜಕ್ಕೆ ವಿದ್ಯಾರ್ಥಿಗಳಿಂದ ಉತ್ತಮ ಕೊಡುಗೆ ಆಗಲಿ. ಅನೇಕ ಮಹನೀಯರು ಸಮ ಸಮಾಜದ ಕನಸು ಕಂಡಿದ್ದರು. ಅವರ ಆದರ್ಶಗಳನ್ನು ಅನುಸರಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಿರಿ ಎಂದು ತಿಳಿಸಿದರು.

ಮಾನವೀಯ ಮೌಲ್ಯ,ತಂದೆ ತಾಯಿಗಳ ಬಗ್ಗೆ ಗುರು ಹಿರಿಯರು ರಾಜ್ಯ ರಾಷ್ಟ್ರದ ಬಗ್ಗೆ ಗೌರವವನ್ನು ಹೊಂದಿರಬೇಕು. ಸಮಾಜಕ್ಕೆ ನಮ್ಮಿಂದ ಯಾವುದಾದರೂ ಒಂದು ಉನ್ನತ ಉತ್ತಮವಾದ ಕಾಣಿಕೆ ನೀಡುವ ಮೂಲಕ ಋಣ ತೀರಿಸಬೇಕು ಎಂದು ಹೇಳಿದರು.

ಪರಸ್ಪರ ಒಬ್ಬರನ್ನು ಒಬ್ಬರು ಕರುಣೆ ಪ್ರೀತಿ ದಯಾ ಅಂತಕರಣ ದಿಂದ ಕಾಣಬೇಕು. ಅನೇಕ ಉದಾಹರಣೆ ತಾತ್ವಿಕ ಕಥೆಗಳ ಮೂಲಕ ವಿದ್ಯಾರ್ಥಿಗಳ ಮನ ಪರಿವರ್ತನೆ ಆಗುವಂತೆ ತಿಳಿಸಿಕೊಟ್ಟರು. ಡಯಟ್ ಬಳ್ಳಾರಿಯ ಉಪನ್ಯಾಸಕರಾದ ಎಸ್ ನಿಂಗಪ್ಪ ಮಾತನಾಡಿ ಇಲಾಖೆಯ ವತಿಯಿಂದ ಈ ವರ್ಷ ಮೌಲ್ಯ ಶಿಕ್ಷಣದ ಬಗ್ಗೆ ಪಠ್ಯಕ್ರಮ ಅಳವಡಿಸಲಾಗಿದೆ. ಶಿಕ್ಷಕರು ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಲು ತಿಳಿಸಿದರು.

ಮುಖ್ಯೋಪಾಧ್ಯಾಯ ಬಾರಿಕರ ಸೂರ್ಯಕಾಂತ್ ಅಧ್ಯಕ್ಷತೆ ವಹಿಸಿದ್ದರು. ಎಸ್ ಡಿ ಎಂ ಸಿ ಅಧ್ಯಕ್ಷ ಮಹಮದ್ ರಫಿ ಶಿಕ್ಷಕರಾದ ಸ್ವರೂಪಾರಾಣಿ ಮಂಜುಳಾ ಗುರುಪ್ರಸಾದ್ ಜ್ಯೋತಿ ಎಂ ಜೆ ಉಪಸ್ಥಿತ-ರಿದ್ದರು.

ಶಿಕ್ಷಕರಾದ ರೇಣುಕಾ ಊಳಿಗದ, ಪ್ರತಿಭಾ ಎಚ್, ವಿಘ್ನೇಶ್ವರ ಮಠದ ನಿರ್ವಹಿಸಿದರು. ಶಾಲೆಯ ವಿದ್ಯಾರ್ಥಿಗಳು ಮೌಲ್ಯ ಶಿಕ್ಷಣದ ಕುರಿತು ಉಪಯುಕ್ತ ಮಾಹಿತಿ ಪಡೆದುಕೊಂಡರು.

## ಗ್ರಾಮೀಣ ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸುವಂತೆ ಒತ್ತಾಯ

ಹರಪನಹಳ್ಳಿ: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ ಹಾಗೂ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿ ಎಸ್‌ಎಫ್‌ಐ ಸಂಘಟನೆ ಕಾರ್ಯಕರ್ತರು ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಹಾಗೂ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವರೆಡ್ಡಿ ಮಾತನಾಡಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಸಂಚಾರಕ್ಕೆ ಸಾರಿಗೆ ಬಸ್‌ಗಳೇ ಜೀವನಾಡಿಯಾಗಿದ್ದು ಸರಿಯಾದ ಸಮಯಕ್ಕೆ ಬಸ್ ಬರದಿದ್ದರೆ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆಯಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಾಲೂಕಿನ ಎಲ್ಲಾ ಗ್ರಾಮೀಣ ಪ್ರದೇಶಗಳಿಂದ ಸರಿಸುಮಾರು 7, ಸಾವಿರಕ್ಕಿಂತ ಹೆಚ್ಚಿನ



ವಿದ್ಯಾರ್ಥಿಗಳು ವ್ಯಾಸಂಗ ಮಾಡುಲು ನಗರಕ್ಕೆ ಬರುತ್ತಾರೆ, ಆದರೆ ಬಸ್ ವ್ಯವಸ್ಥೆ ಇಲ್ಲದ ಕಾರಣಕ್ಕೆ ತಮ್ಮ ಶೈಕ್ಷಣಿಕ ಭವಿಷ್ಯವನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ, ಈ ಕುರಿತು ಸಾರಿಗೆ ಇಲಾಖೆಗೆ ಬಸ್ ಬಿಡುವಂತೆ ಹಲವಾರು ಬಾರಿ ಮನವಿ ಸಲ್ಲಿಸಿದರು. ಮನವಿಗೆ ಸ್ಪಂಧಿಸದೆ ನಿರ್ಲಕ್ಷ್ಯತನ ವಹಿಸಿರುವುದು ಅತ್ಯಂತ ಖಂಡನಿಯ ಎಂದರು. ವಸತಿ ನಿಲಯಗಳು ತಮ್ಮ ಆಯ್ಕೆ ಪಟ್ಟಿ ಪ್ರಕಟಿಸಲು ಹಿಂದೇಟು ಹಾಕುತ್ತಿದೆ ಕೂಡಲೇ ತನ್ನ ಪಟ್ಟಿಯನ್ನು ಪ್ರಕಟಿಸಿ ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳ ಸೌಲಭ್ಯಗಳು ಕೂಡಲೇ ನೀಡಬೇಕು ಎಂದು ಅವರು ಒತ್ತಾಯಿಸಿದರು. ಎಸ್‌ಎಫ್‌ಐ ತಾಲೂಕು ಸಂಚಾಲಕ ಮಲ್ಲಿಕಾರ್ಜುನ, ಮತ್ತು ತಾಲೂಕು ಸಹ ಸಂಚಾಲಕ ಸಂಜುನಾಯ್ಕ ಮಾತನಾಡಿ ನಮ್ಮ ಬೇಡಿಕೆಗಳಿಗೆ ಅಧಿಕಾ-ರಿಗಳು ಸ್ಪಂದಿಸದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ಹರಪನಹಳ್ಳಿ ಬಂದ್ ಮಾಡಿ ಹೋರಾಟಕ್ಕೆ ಮುಂದಾಗುತ್ತೇವೆ ಎಂದರು. ಪ್ರತಿಭಟನೆಯಲ್ಲಿ ಗಣೇಶ್, ಗೌತಮಿ, ಮಂಗಳಮ್ಮ, ಪ್ರಿಯಾ, ಸುಜಾತ, ಮೋಹನ್, ಕಿರಣ್, ಬಸವರಾಜ್, ಸಂಜಯ್, ಕೃಷ್ಣ, ವಿಜಯಕುಮಾರ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

## ಮುಂಗಾರು ಮಳೆಗಾಗಿ ಬುಡ್ಡೆಕಲ್ಲಿಗೆ ನೀರು ಹಾಕಿ ವಿಶೇಷ ಪೂಜೆ



ಕೂಡ್ಲಿಗಿ: ತಾಲ್ಲೂಕಿನಲ್ಲಿ ಮುಂಗಾರು ಮಳೆ ಬಾರದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಮಂಗಳವಾರ ಬುಡ್ಡೆಕಲ್ಲಿಗೆ ನೀರು ಹಾಕಿ, ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಳೆಗಾಗಿ ಪ್ರಾರ್ಥಿಸಲಾಯಿತು.

ಆರಂಭದಲ್ಲಿ ಕುಂಬಾರ ಮನೆಗೆ ಹೋಗಿ ಕುಂಬವನ್ನು ತೆಗೆದುಕೊಂಡು ಊರಮ್ಮ ದೇವಿಯ ಬಾವಿಗೆ ಹೋಗಿ ಗಂಗೆ ಪೂಜೆ ನೆರವೇರಿಸಿ, ಅಲ್ಲಿಂದ ಕೊಡಗಳಲ್ಲಿ ನೀರು ತುಂಬಿಕೊಂಡು ಬಂದು ಗುಳೆ ಲಕ್ಕಮ್ಮ ದೇವಸ್ಥಾನದ ಮುಂದಿನ ಕ-ರಿಗಲ್ಲಿಗೆ (ಬುಡ್ಡೆಕಲ್ಲು) ಪೂಜೆ ಮಾಡಿ ಮಹಾ ಮಂಗಳಾರತಿ ನಡೆಸಿದರು.

ನಂತರ ಪೇಟೆ ಬಸವೇಶ್ವರ ದೇವಸ್ಥಾನದ ಓಣಿಯ ಯುವಕರು ಊರಮ್ಮ ಬಾವಿಯಿಂದ 101 ಬಿಂದಿಗೆ ನೀರು ತಂದು ಜಲಾಭಿಷೇಕ ನಡೆಸಿದರು. ಇದಾದ ನಂತರ ವಾಡಿಕೆಯಂತೆ ಊರಮ್ಮ ದೇವಿ ದೇವಸ್ಥಾನದಲ್ಲಿ ಊರಮ್ಮ ದೇವಿ ಬಾವಿಯಲ್ಲಿ ಗಂಗೆ ಮಾಡಿಕೊಂಡು ಬಂದಿದ್ದ ಕುಂಬವನ್ನು ದೇವಸ್ಥಾನದ ದ್ವಾರ ಬಗಲಲ್ಲಿಟ್ಟು ಪೂಜೆ ಮಾಡಿ, ಕುಂಬದ ಮೇಲೆ ಮೊರವನ್ನಿಟ್ಟು ಅದರ ಮೇಲೆ ಬಾಲಕನನ್ನು ಕೂಡಿಸಿ ಮಳೆ ಬರುವುದಾದರೆ ಕುಂಬದ ಮೇಲೆ ಕುಳಿತಿ-ರುವ ಬಾಲಕ ಬಲಕ್ಕೆ ತಿರುಗಲಿ ಎಂದು ದೇವಿಯಲ್ಲಿ ಹರಕೆ ಮಾಡಿಕೊಂಡರು.

ಭಕ್ತರ ಹರಕೆಯಂತೆ ಕುಂಬದ ಮೇಲೆ ಕುಳಿತಿದ್ದ ಬಾಲಕ ನಿದಾನವಾಗಿ ಬಲದಿಂದ ಒಂದು ಸುತ್ತು ತಿರುಗಿದ್ದ-ರಿಂದ ನೆರೆದಿದ್ದ ದೈವಸ್ಥರು, ಭಕ್ತರು ಹರ್ಷ ವ್ಯಕ್ತಪಡಿಸಿ, ಊರಮ್ಮ ದೇವಿಗೆ ಪೂಜೆ ಸಲ್ಲಿಸಿ ಮಹಾ ಮಂಗಳಾರತಿ ನೆರವೇರಿಸಿದರು.

ಪಟ್ಟಣದ ದೈವಸ್ಥರಾದ ಹಿರೇಮಠದ ಚಿದಾನಂದಸ್ವಾಮಿ, ಕೂಡ್ಲಿಗಿ ಜೋಯಿಸ್ ಹವಧನ್, ಬಣಕಾರ ಮಂಜುನಾಥ, ಸೋಗಿ ಗುರುಸಿದ್ದಪ್ಪ, ಬಣಕಾರ ಶಿವಣ್ಣ, ಬಣಕಾರ ಸಿದ್ದಣ್ಣ, ಎ.ಎಂ. ಚನ್ನಯ್ಯ, ತುಪ್ಪಳ್ಳಿ ಕೊಟ್ರೇಶ್, ನಾಗೇಶ್, ಊರಮ್ಮ ಆರ್ಚಕ ಬಿ. ನಾಗರಾಜ, ಹನಸಿ ಶಿವಣ್ಣ, ಕಾಯಿಕೆಡವ ವಿಜಯಕುಮಾರ್, ಕೆ.ಬಿ. ಮಲ್ಲಿಕಾರ್ಜುನ, ತಳವಾರ ಸುರೇಶ್, ಮಡಿವಾಳ ತಿರುಕಪ್ಪ, ಸೇರಿದಂತೆ ಪಟ್ಟಣದ ದೈವಸ್ಥರು ಪಾಲ್ಗೊಂಡಿದ್ದರು.

## ಮಳೆ-ಬೆಳೆ ಸಮೃದ್ಧಿಗಾಗಿ ತಂಬ್ರಹಳ್ಳಿಯಲ್ಲಿ ಜಲಾಭಿಷೇಕ



ಹಗರಿಬೊಮ್ಮನಹಳ್ಳಿ: ಪ್ರಸಕ್ತ ವರ್ಷದಲ್ಲಿ ಉತ್ತಮ ಮಳೆಯಾಗಿ, ಸಮೃದ್ಧ ಬೆಳೆ ಬರಲಿ ಎಂದು ಪ್ರಾರ್ಥಿಸಿ ತಾಲ್ಲೂಕಿನ ತಂಬ್ರಹಳ್ಳಿಯ ರೈತರು ಹಾಗೂ ಗ್ರಾಮಸ್ಥರು ಒಗ್ಗೂಡಿ ಊರಿನ ಎಲ್ಲಾ ಕರಗಲ್ಲುಗಳಿಗೆ ಜಲಾಭಿಷೇಕ ಹಾಗೂ ವಿಶೇಷ ಪೂಜೆ ಅಭಿಷೇಕ ನೆರವೇ-ರಿಸಿದರು.

ಮುಂಗಾರು ಹಂಗಾಮು ಆರಂಭವಾಗುತ್ತಿರುವುದರಿಂದ ಕೃಷಿ ಚಟುವಟಿಕೆಗಳು ಯಾವುದೇ ವಿಘ್ನವಿಲ್ಲದೆ ಸುಗಮವಾಗಿ ನಡೆಯಲಿ, ಅನ್ನದಾತನ ಬದುಕು ಹಸನಾಗಲಿ ಎಂಬ ಸದುದ್ದೇಶದಿಂದ ಗ್ರಾಮಸ್ಥರೆಲ್ಲರೂ ಭಕ್ತಿಪೂರ್ವಕವಾಗಿ ಈ ಧಾರ್ಮಿಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಗ್ರಾಮದ ಜಂಗಮ ವಂಶಸ್ಥರಾದ ಮಲ್ಲಯ್ಯ, ಪಂಚಯ್ಯ ಹಾಗೂ ಡಿ.ಎಂ. ಪ್ರವೀಣ ಸ್ವಾಮಿ ಅವರು ಪೂಜಾ ಕೈಂಕರ್ಯಗಳ ಮುಂದಾಳತ್ವ ವಹಿಸಿ, ಶಾಸ್ತ್ರೋಕ್ತವಾಗಿ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿಕೊಟ್ಟರು.

"ಪ್ರತಿವರ್ಷದಂತೆ ಈ ವರ್ಷವೂ ಸಕಾಲಕ್ಕೆ ಮಳೆಯಾಗಿ, ಭೂಮಿ ತಾಯಿ ಹಸಿರಿನಿಂದ ಕಂಗೊಳಿಸಲಿ. ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿ ಎನ್ನುವುದೇ ಈ ವಿಶೇಷ ಪೂಜೆಯ ಸಂಕಲ್ಪವಾಗಿದೆ" ಎಂದು ಗ್ರಾಮದ ಹಿರಿಯ ಮಹಾಬಲೇಶ್ವರ ಸ್ವಾಮಿ ತಿಳಿಸಿದರು.

ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಗ್ರಾಮದ ಪ್ರಮುಖರಾದ ಟಿ. ಪಕ್ಕೀರಪ್ಪ, ಮ್ಯಾಗಳಮನಿ ಬಸವರಾಜಪ್ಪ, ಕಾತರಕಿ ಕೊಟ್ರೇಶ್, ಕೆಂಚಪ್ಪ, ಅಂಬರೀಶ, ಸಂತೋಷ, ದೊಡ್ಡಬಸಪ್ಪ, ಗಡೆದು ಕೊಟ್ರೇಶ್, ಆನೇಕಲ್ ವಿರೂಪಾಕ್ಷಪ್ಪ, ಚಣ್ಣದ ಮಲ್ಲಿಕಾರ್ಜುನ, ಸುಣಗಾರ ಮಾರುತಿ, ನಿಂಗರಾಜ, ಲೋಕೇಶ್, ಮಹೇಶ್ ಕಿನ್ನಾಳ, ರವಿ, ಅಸೂಳಿ ಮಾರುತಿ, ಹೊಳೆಯಪ್ಪ, ನವೀನ, ಪಟ್ಟಣಶೆಟ್ಟಿ ವೀರಬಸಪ್ಪ, ಬಸಯ್ಯ, ಮುದುಕಪ್ಪ, ಶಿವು, ಚನ್ನಪ್ಪ ಸೇರಿದಂತೆ ನೂರಾರು ರೈತರು ಮತ್ತು ಸಾರ್ವಜನಿಕರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು. ಪೂಜೆಯ ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗಿಸಲಾಯಿತು.

## ಮುಂಗಾರು ಮಳೆಗಾಗಿ ಕಪ್ಪೆಗಳ ಮದುವೆ...!



ಕೂಡ್ಲಿಗಿ: ಮುಂಗಾರು ಮಳೆಗಾಗಿ ತಾಲೂಕಿನಲ್ಲಿನ ಕುಪ್ಪಿನಕೆರೆ ಗ್ರಾಮದ ಆಂಜನೇಯ ದೇವಸ್ಥಾನದಲ್ಲಿ ಕಪ್ಪೆಗಳಿಗೆ ಗ್ರಾಮಸ್ಥರು ವಿವಾಹ ನೆರವೇರಿಸಿದರು.

ಮುಂಗಾರು ಮಳೆ ಬಾರದ ಹಿನ್ನೆಲೆಯಲ್ಲಿ ವರುಣನ ಕೃಪೆಗಾಗಿ ಕುಡಿಯುಲು ಹನಿ ನೀರಿಲ್ಲ, ಬಣ್ಣ ಕೊಡತಿನಿ ಬಾ ಮಳೆಯೇ ಸುಣ್ಣ ಕೊಡತಿನಿ ಸುರಿಮಳೆಯೇ... ಸುರಿ ಮಳೆಯೇ..." ಎಂದು ಹಾಡ್ತಾ ಅವರನ್ನೇ ಹಿಂಬಾಲಿಸೋ ಗ್ರಾಮಸ್ಥರು. ಹೌದು, ಇದ್ಯಾವುದೋ ಸಂಭ್ರಮದ ಉತ್ಸವವಲ್ಲ, ಬದಲಿಗೆ ಗ್ರಾಮಸ್ಥರು ದೇವರಲ್ಲಿ ಕಪ್ಪೆಗಳಿಗೆ ವಿವಾಹ ಮಾಡಿ ಊರೆಲ್ಲಾ ಮೆರವಣಿಗೆ ಮಾಡಿ ಆಂಜನೇಯ ದೇವರಿಗೆ ಪೂಜೆ ಸಲ್ಲಿಸಿದರು. ರೈತರು. ಆಂಜನೇಯ ದೇವಸ್ಥಾನದ ಪೂಜಾರಿ ಶಿವಕುಮಾರ್, ಪೂಜಾರ್ ಬಸವರಾಜ್, ಮಡಿವಾಳ ತಿಮ್ಮಜ್ಜ, ದೇವರ ಮನೆ ಹೊನ್ನಪ್ಪ ಇನ್ನಿತರರು ಗ್ರಾಮಸ್ಥರು ಹಾಗೂ ರೈತರು ಸೇರಿದಂತೆ ಮಳೆಗಾಗಿ ದೇವರಲ್ಲಿ ಪ್ರಾರ್ಥಿಸಲಾಯಿತು.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಪ್ರತಿದಿನದ ಬದುಕು ನಿತ್ಯೋತ್ಸವ

ಭಗವಂತ ಜಗವ ಸೃಜಿಸಿ ನಮ್ಮನ್ನು ಈ ಸೃಷ್ಟಿಯಲ್ಲಿ ಇರಿಸಿರುವುದೇ
ನಾವು ನಮ್ಮ ಕರ್ಮ ಕಳೆದುಕೊಂಡು ಈ ಬಂಧನದಿಂದ ಮುಕ್ತರಾಗಲಿ ಎಂದು......

ಗುರುಗಳ ಬಳಿಗೆ ಬಂದ ಒಬ್ಬ ವ್ಯಕ್ತಿ ಕೇಳಿದನಂತೆ: ನನಗೆ ಸಂತೋಷ ಬೇಕು, ನನಗೆ ನೆಮ್ಮದಿ ಬೇಕು.

ಆಗ ಗುರುಗಳು ನಗುತ್ತಾ ಹೇಳಿದರಂತೆ, ಮೊದಲು 'ನನಗೆ' ಎಂಬುದನ್ನು ತೆಗಿ, ಬಳಿಕ 'ಬೇಕು' ಎಂಬುದನ್ನು ತೆಗಿ. ಅಲ್ಲಿಗೆ ಉಳಿಯುವುದು ಸಂತೋಷ, ನೆಮ್ಮದಿ.. ಸಾಕಲ್ಲವೇ ಎಂದು ಕೇಳಿದರಂತೆ.

ಗೆಳೆಯರೇ ಸಂತೋಷಕ್ಕೆ, ನೆಮ್ಮದಿಯ ಬದುಕಿಗೆ ಇದು ಅತ್ಯುತ್ತಮ ಸೂತ್ರವಂತೂ ಹೌದು. ಹಬ್ಬ, ಸಂಭ್ರಮ, ಉತ್ಸವ ಅಂದಾಗಲೆಲ್ಲ ಕೆಲವರಿಗೆ ಊರಿನ ಜಾತ್ರೆ ನೆನಪಾಗಬಹುದು, ಕೆಲವರಿಗೆ ಅವರ ಹುಟ್ಟುಹಬ್ಬ, ಇನ್ನು ಕೆಲವರಿಗೆ ಹೊಸ ವರ್ಷ, ಮತ್ತೆ ಕೆಲವರಿಗೆ ಪ್ರೇಮಿಗಳ ದಿನಾಚರಣೆ ಹೀಗೆ. ಉತ್ಸವ ಎಂದರೆ ನೂರಾರು ಜನ ಸೇರುವುದು, ಏನೇನೋ ಖರೀದಿಸಿ ತಿನ್ನುವುದು, ಹತ್ತಾರು ಜನರ ಬಳಿ ಮಾತನಾಡುವುದು, ಹಿತವಾದ ಸಂಗೀತಕ್ಕೆ ಕುಣಿಯುವುದು, ಮೈಮರೆತು ಖುಷಿಪಡುವುದು ಎಂದು ನಾವು ಅರ್ಥ ಮಾಡಿಕೊಂಡಿದ್ದೇವೆ. ಅದಕ್ಕಾಗಿಯೇ ನಾವು ಉತ್ಸವಗಳಿಗೆ ಕಾಯುತ್ತೇವೆ, ಸ್ನೇಹಿತರನ್ನು ಬೇಟಿಯಾಗಲು ಹಾತೊರೆಯುತ್ತೇವೆ, ಮನೆಗೆ ಯಾರಾದರೂ ಬರಲಿ ಎಂದು ಎದುರು ನೋಡುತ್ತೇವೆ. ಇಷ್ಟದ ವ್ಯಕ್ತಿಯ ಭೇಟಿ, ಒಂದು ಸಿನಿಮಾ, ಯಕ್ಷ ಗಾನ, ಗೆಳೆಯರ ಜತೆ ಟೂರ್ ಇವೆಲ್ಲವೂ ಸಂಭ್ರಮದ ಹುಡುಕಾಟಗಳೇ.

ಆದರೆ, ಒಮ್ಮೆ ಯೋಚಿಸಿ ನೋಡಿ. ಹೀಗೆ ಏನೋ ಖುಷಿಯಾಗಿದ್ದು ಸಂಭವಿಸುತ್ತದೆ ಎಂದು ಕಾಯುವುದಕ್ಕಿಂತ ಪ್ರತಿಕ್ಷ ಣವೂ ಒಂದು ಸಂಭ್ರಮ ಎಂದು ಭಾವಿಸಿ ಮುಂದಡಿ ಇಟ್ಟರೆ ಬದುಕು ಎಷ್ಟೊಂದು ಖುಷಿಯಾಗಿರುತ್ತದೆ ಅಲ್ಲವೇ? ಸಂಭ್ರಮ ಎನ್ನುವುದು ಆಂತರಿಕ ವಿಚಾರ. ಆದರೆ, ನಾವು ಅದನ್ನು ಹೊರಗೆ ಹುಡುಕುತ್ತಿದ್ದೇವೆ ಅಷ್ಟೆ. ಸುಮ್ಮನೆ ಗಮನಿಸಿ, ಮನಸಿನೊಳಗೆ ನೋವೋ ಯಾತನೆಯೋ ಇದ್ದರೆ ಎಂಥ ಪಾರ್ಟಿಗೆ ಹೋದರೂ ನಾವು ಖುಷಿಯಾಗಿರಲು ಸಾಧ್ಯವೇ? ಯಾವ ಹಬ್ಬ ಬಂದರೂ ನಮ್ಮ ಮನಸಿನ ಸೂತಕ ಕಳೆದೀತೇ?

ಅದೇ ರೀತಿ ಮನಸು ಪ್ರಫುಲ್ಲವಾಗಿದ್ದರೆ ಯಾವ ಕಿರಿಕಿರಿಯೇ ಎದುರಾದರೂ ನಿರುಮ್ಮಳವಾಗಿ ಇರುವುದಿಲ್ಲವೇ?

ನಮ್ಮ ಬದುಕು ಇರುವುದು ಗರಿಷ್ಠ ಎಂದರೆ 80 ವರ್ಷ. ಅದಕ್ಕಿಂತ ಹೆಚ್ಚು ಬಾಳಿದರೆ ಬೋನಸ್ ಅಥವಾ ಯಾವ ಕ್ಷ ಣ ಬೇಕಾದರೂ ಈ ಜೀವನ ಅಂತ್ಯಗೊಳ್ಳಬಹುದು. ಜೀವನದ ಅರ್ಧ ಭಾಗವನ್ನು ನಾವು ನಿದ್ದೆಯಲ್ಲೇ ಕಳೆಯುತ್ತೇವೆ. ಉಳಿದ ನಲವತ್ತು ವರ್ಷಗಳಷ್ಟೇ ನಮ್ಮದು. ಅದರಲ್ಲೂ ಜೀವನ ಅಂದರೆ ಏನು ಎನ್ನುವುದು ಅರಿವಾಗುವ ಹೊತ್ತಿಗೆ 20 ವರ್ಷಗಳು ಕಳೆದುಹೋಗಿರುತ್ತದೆ. ಕೊನೆಯ ಕೆಲವು ವರ್ಷಗಳು ನಾವು ಬಯಸಿದಂತೆ ಬದುಕಲು ಕಷ್ಟವಾಗುತ್ತದೆ. ಹಾಗಿರುವಾಗ ಯೌವನ ಮತ್ತು ವೃದ್ಧಾಪ್ಯದ ನಡುವಿನ ಕೆಲವು ವರ್ಷಗಳಷ್ಟೇ ನಮ್ಮ ಪಾಲಿಗೆ ನಿಜವಾಗಿ ಸಿಗುವಂಥದ್ದು, ನಾವು ಸಂಭಾಳಿಸಬೇಕಾದದ್ದು.

ನಾನೇ ಎಲ್ಲವನ್ನೂ ಬರೆಯುತ್ತೇನೆ... ಎನ್ನುವ ಅಹಂ ಬೇಡ.... ದಿನಕ್ಕೆ ಸಾವಿರಾರು ಪುಸ್ತಕಗಳು ಮುದ್ರಣವಾಗುತ್ತಲೇ ಇವೆ .ಜಾಸ್ತಿ ಓದಿದಿನಿ ಎನ್ನುವ ಗರ್ವ ಬೇಡ.... ಓದಲು ಸಾಗರದಷ್ಟಿದೆ ಇನ್ನೂ...

ಎಲ್ಲ ಬಲ್ಲವರಿಲ್ಲ !!ಬಲ್ಲವರು ಬಹಳಿಲ್ಲ!!! ಮಗುವಿನಿಂದ ಗುರು ಹಿರಿಯರವರೆಗೂ ನಾವಿನ್ನೂ ಕಲಿಯುವದು ತುಂಬ ಇದೆ ಇಷ್ಟೇ ಮುಗಿಯಿತು ಬೆಳಗಾಯಿತು ಎಂದರೆ ರಾತ್ರಿಯು ಬರುವುದು... ರಾತ್ರಿಯಾಯ್ತು ಅಂತ ತಿಳಿದರೆ ಇನ್ನೆಲ್ಲೋ ಬೆಳಕಿನ ಆರಂಭವಾಗಿರುತ್ತದೆ.

ನೀ ಸಾಗುವ ಪಥ ಹೊಸ ಹೊಸ ಪಾಠಗಳನ್ನು ಕಲಿಸುತ್ತ ಅನುಭವಗಳನ್ನು ನೀಡುತ್ತಾ ಸಾಗುತ್ತದೆ. ಕೆಡಕನ್ನು ಒಳಿತನ್ನು ಆಯ್ಕೆ ಮಾಡಿಕೊಳ್ಳುವದು ನಿನಗೆ ಬಿಟ್ಟಿದ್ದು.. ಏಕೆಂದರೆ ಪ್ರತಿಯೊಂದಕ್ಕೂ ಫಲಾಫಲ ನಮಗಿದೆ.

ಬಲು ಚಾಲಾಕಿ ಈ ಬದುಕು
ಇಂದು ಕಸಿಯುತಿದೆ, ನಾಳೆಗಳ ಕೊಟ್ಟು....

ಪ್ರಪಂಚವೆಂದರೆ ಒಂದು ಕ್ಷಣ ಸುಖ, ಒಂದು ಕ್ಷಣ ದುಃಖ. ನಶ್ವರವಾದ ಜಗದಲ್ಲಿ ಎಲ್ಲವೂ ಒಂದು ದಿನ ಮರೆಯಾಗುತ್ತದೆ.

ಎಲ್ಲವನ್ನೂ ನೋಡುತ್ತಿರುವ ಆ ಭಗವಂತ ಅಲ್ಲಿ ಕುಳಿತು ನಮ್ಮಾಟವ ನೋಡುತ್ತಿರುತ್ತಾನೆ... ಇದು ಅವನ ಮೈದಾನ ನಾವಿಲ್ಲಿ ಆಟಗಾರರಷ್ಟೇ... ಎಂಬ ಸತ್ಯದ ಅರಿವಾಗಬೇಕು ...

ಮನುಷ್ಯ ಮತ್ತು ದೇವರ ನಡುವಿನ ಕೊಂಡಿಯೇ ನಂಬಿಕೆ ಅದೇ ಈ ಬದುಕನ್ನು ಜೀವಂತವಾಗಿರುಸುತ್ತೆ ಮತ್ತು ಮುನ್ನೆಡೆಸುತ್ತೆ.

ಸಾಮಾನ್ಯವಾಗಿ ಲೋಕದ ಜನ ಹಗಲನ್ನು ತಮ್ಮ ಕುಟುಂಬ ಪೋಷಣೆಯ ಚಿಂತೆಯಲ್ಲಿ ಹಾಗೂ ಇರುಳನ್ನು ವಿಷಯ ಸುಖ, ನಿದ್ರೆಯಲ್ಲಿ ಕಳೆಯುತ್ತಾರೆ. ಆತ್ಮಜ್ಞಾನದಲ್ಲಿ ಬಹುಪಾಲು ಜನರಿಗೆ ಆಸಕ್ತಿ ಇರುವುದಿಲ್ಲ. ಲೋಕದಲ್ಲಿ ನಿರಂತರ ಸಾವನ್ನು ಕಣ್ಣಾರೆ ಕಾಣುತ್ತಿದ್ದರೂ ದೇಹ ಅನಿತ್ಯವೆಂಬುದು ಅರ್ಥವಾಗುವುದಿಲ್ಲ.ಸಂಸಾರ ಬಂಧದಿಂದ ಪಾರಾಗಬೇಕೆಂದರೆ ಆಧ್ಯಾತ್ಮ ದ ದೀಪ ಮನದಿ ಬೆಳಗಬೇಕು.

ಗುರು ಕಲಿಸಿದ ವಿದ್ಯೆ.. ತಾಯಿ ನೀಡಿದ ಮಮತೆ.. ತಂದೆ, ಹಿರಿಯರು ಹೇಳಿದ ಸಲಹೆ.. ಕಿರಿಯರು ನೀಡಿದ ಪ್ರೀತಿ.. ರೈತ ಕೊಟ್ಟ ಅನ್ನ..ಯೋಧ ನೀಡಿದ ರಕ್ಷಣೆ ..ನಿನ್ನ ಹೊತ್ತ ಭೂಮಿತಾಯಿ ..ನಿನಗೆ ಭಾಷೆ ಸಂಸ್ಕೃತಿ ಕಲಿಸಿದ ನಾಡು,ದೇಶ... ಕಷ್ಟಕಾಲದಲ್ಲಿ ಜೊತೆಯಾದ ಸ್ನೇಹ ಬಾಂದವ್ಯಗಳನ್ನು ಎಂದಿಗೂ ಮರೆಯದಿರು..

ಬದುಕಿನಲ್ಲಿ ಬಾಗುವದನ್ನು ಕಲಿ
ಬದುಕುವದನ್ನು ಕಲಿ ......
ಪ್ರತಿಕ್ಷಣವೂ ಅಮೂಲ್ಯ

ಹೀಗಾಗಿ ಜೀವನದ ಪ್ರತಿ ಕ್ಷ ಣವು ಅಮೂಲ್ಯ, ಇದನ್ನು ಉತ್ಸವ ಎಂಬಂತೆ ಸ್ವೀಕರಿಸುವುದೇ ನಿಜವಾದ ಬುದ್ಧಿವಂತಿಕೆ. ನಾವು ಯಾರ ಮೇಲೋ ಸಿಟ್ಟು ಮಾಡಿಕೊಂಡು, ಜಗಳ ಕಾಯುತ್ತಾ ಕುಳಿತರೆ ಅಮೂಲ್ಯ ಕ್ಷ ಣಗಳನ್ನು ಕಳೆದುಕೊಂಡಂತೆ. ಅದೇ ಇನ್ನೊಬ್ಬರಿಗೆ ಖುಷಿಯನ್ನು ಕೊಡುತ್ತಾ ನಾವೂ ಸಂಭ್ರಮಿಸುತ್ತಿದ್ದರೆ ಆ ಕ್ಷ ಣಗಳನ್ನು ನಮ್ಮದಾಗಿಸಿಕೊಂಡಂತೆ.

ಪ್ರತಿ ಕ್ಷ ಣವೂ ಸವಾಲಾಗಿರುವ ಬದುಕಿನಲ್ಲಿ ಇದೆಲ್ಲ ಸಾಧ್ಯವೇ ಎನ್ನುವ ಪ್ರಶ್ನೆ ಎದುರಾಗುತ್ತದೆ. ನಿಜವೆಂದರೆ, ಸಮಸ್ಯೆ ಎನ್ನುವುದು ಎಲ್ಲರಿಗೂ ಇರುತ್ತದೆ. ಆದರೆ, ಅದಕ್ಕೆ ತೋರುವ ಪ್ರತಿಕ್ರಿಯೆಗಳು ಭಿನ್ನವಾಗಿರುತ್ತವೆ. ಎಲ್ಲೋ ಒಂದು ಕಡೆ ಹೋಗಬೇಕಾಗಿರುತ್ತದೆ ಎಂದಿಟ್ಟುಕೊಳ್ಳಿ... ಅಯ್ಯೋ ಹೋಗಬೇಕಲ್ಲ ಎಂದು ಭಾವಿಸಿದರೆ ಅದು ಯಾತನೆಯಾಗುತ್ತದೆ. ಓ... ಇವತ್ತು ಅಲ್ಲಿಗೆ ಹೋಗಲಿಕ್ಕಿದೆ ಎಂದು ಭಾವಿಸಿದರೆ ಅದು ಸಂತೋಷ ಆಗುತ್ತದೆ.

ಕಚೇರಿಯಲ್ಲಿ ಹಿರಿಯ ಅಧಿಕಾರಿಗಳು ಏನಾದರೂ ಕೆಲಸ ಹೇಳಿದ್ದಾರೆ ಎಂದಿಟ್ಟುಕೊಳ್ಳಿ. 'ಅವರಿಗೆ ನಾನೇ ಕಾಣೋದು. ನಾನೇ ಯಾಕೆ ಮಾಡ್ಬೇಕು, ಬೇರೆಯವರು ಇಲ್ವಾ," ಎಂದು ಭಾವಿಸಿದರೆ ಅದರಿಂದ ಮನಸು ಕದಡುತ್ತದೆ. 'ಇಷ್ಟೊಂದು ಜನರಿದ್ದರೂ ನನ್ನಲ್ಲೇ ಹೇಳಿದ್ದಾರಲ್ಲಾ..' ಅಂಥ ಭಾವಿಸಿದರೆ ನಮ್ಮ ಬಗ್ಗೆಯೇ ಹೆಮ್ಮೆ ಮೂಡುತ್ತದೆ.

ಸವಾಲುಗಳು ಕೂಡಾ ಎಲ್ಲರಿಗೂ ಬರುತ್ತದೆ. ಅದನ್ನು ಹೇಗೆ ಸ್ವೀಕರಿಸುತ್ತೇವೆ ಎನ್ನುವುದರ ಆಧಾರದ ಮೇಲೆ ಪರಿಣಾಮ ನಿರ್ಧಾರವಾಗುತ್ತದೆ. ಸವಾಲನ್ನು ಖುಷಿಯಿಂದ ಸ್ವೀಕರಿಸಿದರೆ ಅದೊಂದು ಅನುಭವವಾಗುತ್ತದೆ. ಬೆನ್ನು ಹಾಕಿ ಕುಳಿತರೆ ಸೋಲೂ ಇಲ್ಲ, ಗೆಲುವೂ ಇಲ್ಲ. ಅನುಭವವೂ ಬೆಳೆಯುವುದಿಲ್ಲ.

ಹೆಚ್ಚಿನವರದ್ದೂ ನನಗೂ ಒಳ್ಳೆಯ ಕಾಲ ಬಂದೇ ಬರುತ್ತದೆ ಎನ್ನುವ ಆಟಿಟ್ಯೂಡ್. ಅದಕ್ಕಾಗಿಯೇ ಅವರು ಜಾತಕ ನೋಡುತ್ತಾರೆ. ಗುರು ದೆಸೆ ಯಾವಾಗ, ಶುಕ್ರ ದೆಸೆ ಯಾವಾಗ ಅಂತ ಕಾಯುತ್ತಾರೆ. ಕೆಲವೊಮ್ಮೆ ದೆಸೆಗಳ ಹೆಸರು ಹೇಳಿ ಒಳ್ಳೆಯ ಅವಕಾಶವನ್ನೂ ಮಿಸ್ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರಿರುತ್ತಾರೆ, ಅವರಿಗೆ ಪ್ರತಿ ಕ್ಷ ಣವೂ ಶುಕ್ರ ದೆಸೆಯೆ! ಏನೇ ಬಂದರೂ ಸ್ವೀಕರಿಸಲು ಮನಸನ್ನು ಸಜ್ಜುಗೊಳಿಸಿಬಿಟ್ಟರೆ ಪ್ರತಿ ಕ್ಷ ಣವೂ ಅವಕಾಶಗಳಾಗಿ ಪರಿವರ್ತನೆಯಾಗುತ್ತದೆ.

ಸುಮ್ಮನೆ ಆಲೋಚಿಸಿ ನೋಡಿ, ಬದುಕು ಎಂದು ಹಬ್ಬ, ಅದನ್ನು ಪ್ರೀತಿಯಿಂದ ಆಚರಿಸಬೇಕು. ಬದುಕು ಎಂದು ಕನಸು. ಅದನ್ನು ನಾವೇ ಅದ್ಭುತವಾಗಿ ಸಾಕಾರಗೊಳಿಸಬೇಕು. ಬದುಕು ಒಂದು ಹೋರಾಟ, ಅದನ್ನು ಧೈರ್ಯವಾಗಿ ಎದುರಿಸಬೇಕು. ಬದುಕು ಒಂದು ಸುಂದರ ಭಾವಗೀತೆ, ಅದನ್ನು ಖುಷಿಯಿಂದ ಹಾಡುತ್ತಿರಬೇಕು. ಹಾಗೆ ಮಾಡಿದಾಗಲೇ ಅದೊಂದು ನಿತ್ಯ ಉತ್ಸವ.



ಪ್ರಶಾಂತಭಟ್ ಕೋಟೇಶ್ವರ

# ಶರಣ ಸಂಸ್ಕೃತಿಯಲ್ಲಿ ಸ್ತ್ರೀ ಸಂವೇದನೆ

ಶರಣ ಸಂಸ್ಕೃತಿಯಲ್ಲಿ ಸ್ತ್ರೀ ಸಂವೇದನೆ ಎಂಬ ವಿಷಯದ ಕುರಿತು ಮಾತನಾಡುವ ಮುನ್ನ ಸ್ತ್ರೀ ಸಂವೇದನೆ ಎಂಬ ಪದದ ಅರ್ಥವನ್ನು ನೋಡೋಣ. ಸ್ತ್ರೀಯರ ತಮ್ಮ ಬದುಕಿನಲ್ಲಿ ಎದುರಿಸುವ ಅನುಭವಗಳು, ಸವಾಲುಗಳು ಮತ್ತು ಆಶಯಗಳಿಗೆ ಸಂಬಂಧಿಸಿದ ಸಾಮಾಜಿಕ ರಾಜಕೀಯ ಮತ್ತು ಸಾಂಸ್ಕೃತಿಕ ಅರಿವನ್ನು ಸಂವೇದನೆ ಎಂದು ಹೇಳಬಹುದು.

ಸ್ತ್ರೀಪರ ಸಂವೇದನೆ ಎಂದ ಕೂಡಲೇ ಅದನ್ನು ಪುರುಷದ್ವೇಷ ಎಂದು ಅರ್ಥೈಸಿಕೊಳ್ಳುವ ಬದಲು ಮಹಿಳೆಯರ ದೃಷ್ಟಿಕೋನ, ಭಾವನೆಗಳು ಹಾಗೂ ಪ್ರತಿರೋಧಗಳನ್ನು ಕುರಿತ ಭಾವಗಳು ಎಂದು ತಿಳಿಯಬೇಕು. ಜಾತಿ, ವರ್ಗ, ಲಿಂಗ ತಾರತಮ್ಯ, ಶೋಷಣೆ ಮತ್ತು ಸಾಂಪ್ರದಾಯಿಕ ಪಾತ್ರಗಳ ಮಿತಿಗಳನ್ನು ಪ್ರಶ್ನಿಸುವುದನ್ನು ಕೂಡ ಸ್ತ್ರೀ ಸಂವೇದನೆಯು ಒಳಗೊಂಡಿರುತ್ತದೆ.

ತನ್ನ ನಿಲುಕಿನಲ್ಲಿ ಬರುವ ಸಾಮಾಜಿಕ ಅರಿವು, ವ್ಯಕ್ತಪಡಿಸುವಿಕೆ, ಸಾಮಾಜಿಕ ಗೌರವ ಮತ್ತು ಸಮಾನತೆ, ಸಾಮಾಜಿಕ ಸ್ವಾವಲಂಬನೆ ಮತ್ತು ಸಬಲೀಕರಣ ಇವುಗಳ ಕುರಿತು ಮಹಿಳೆ ಹೊಂದಿರುವ ತನ್ನದೇ ಆದ ವೈಯುಕ್ತಿಕ ಅಭಿಪ್ರಾಯವೂ ಆಯಾ ಕಾಲದ ಸಾಮಾಜಿಕ ವಾಸ್ತವಗಳಿಗೆ ಮುಖಾಮುಖಿಯಾಗುತ್ತದೆ ಎಂಬುದು ಕುತೂಹಲದ ಸಂಗತಿ ಆದರೂ ಕೂಡ ಆಯಾ ಕಾಲ ಘಟ್ಟದ ಒತ್ತಡಗಳಿಗೆ ಪ್ರತಿ ಸ್ಪಂದಿಸುವ, ಒಪ್ಪಿಕೊಳ್ಳುವ ಅಪ್ಪಿಕೊಳ್ಳುವ ಇಲ್ಲವೇ ವಿರೋಧಿಸುವ, ಕೆಲ ನಿಯಮಗಳನ್ನು ಮುರಿಯುವ ಮತ್ತೆ ಕೆಲ ನಿಯಮಗಳನ್ನು ಮುರಿದು ಕಟ್ಟುವ ಅಂತಿಮವಾಗಿ ಮೌಲ್ಯಗಳನ್ನು ಪ್ರತಿಪಾದಿಸುವ ಸಂವೇದನೆಗಳನ್ನು ಸ್ತ್ರೀ ಸಂವೇದನೆ ಎಂದು ನಾವು ಕರೆಯಬಹುದು.

ಸಮಾಜದಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳ ಬಗ್ಗೆ ಜಾಗೃತಿಯನ್ನು ಮೂಡಿಸುವುದು ಸಾಮಾಜಿಕ ಅರಿವಿನ ಸಂವೇದನೆಯಾದರೆ ಇದರಲ್ಲಿ ಮಹಿಳೆಯರು ತಮ್ಮ ಮನೆಯಲ್ಲಿ ಅನುಭವಿಸುವ ಸವಾಲುಗಳು ದೈಹಿಕ ಶ್ರಮ,ಕೌಟುಂಬಿಕ ಸಂಬಂಧಗಳು ಹಾಗೂ ಅವುಗಳಲ್ಲಿ ಮಾಡಿಕೊಳ್ಳಬೇಕಾದ ಹೊಂದಾಣಿಕೆಗಳನ್ನು ನಾವು ನೋಡಬಹುದು. ತಮ್ಮ ಭಾವನೆಗಳನ್ನು ಯೋಚನೆಗಳನ್ನು ಯಾವುದೇ ನಿರ್ಬಂಧವಿಲ್ಲದೆ ತಮ್ಮದೇ ಆದ ಶೈಲಿಯಲ್ಲಿ ವ್ಯಕ್ತಪಡಿಸಲು ಇರುವ ಅವಕಾಶಗಳು ಮಹಿಳೆಗೆ ಸಾಕಷ್ಟು ಇದ್ದು ಆಕೆ ಸಾಹಿತ್ಯ ಕಲೆ ರಾಜಕೀಯ ಮತ್ತು ಇತರ ಕ್ಷೇತ್ರಗಳಲ್ಲಿ ಭಾಗವಹಿಸುವ ಮೂಲಕ ಈ ವ್ಯಕ್ತಪಡಿಸುವಿಕೆಯನ್ನು ಕಾಣಬಹುದು. ಲಿಂಗ ಸಮಾನತೆ ಹಾಗೂ ಪುರುಷ ಸಮಾನ ಹಕ್ಕುಗಳನ್ನು ಮಹಿಳೆಯರು ಬಯಸುವುದು ಸ್ತ್ರೀ ಸಂವೇದನೆಯ ಮೂಲ ಉದ್ದೇಶವಾಗಿದೆ. ಇನ್ನು ಮುಖ್ಯವಾಗಿ ಶರಣ ಸಂಸ್ಕೃತಿಯಲ್ಲಿ ಸ್ತ್ರೀ ಸಂವೇದನೆಯನ್ನು ಹೇಳುವುದಾದರೆ ನಾವು ಅದರ ಹಿಂದಿನ ಯುಗಗಳ ಕುರಿತ ಹಿನ್ನೋಟವನ್ನು ಅರಿಯಲೇಬೇಕು.

ಬಸವಾದಿ ಶರಣರ ಶರಣ ಸಂಸ್ಕೃತಿಯ ಕಾಲ ಘಟಕ ಮುನ್ನ ಆದಿಯುಗದಲ್ಲಿ ಮಹಿಳೆಯ ಸರ್ವತಂತ್ರ ಸ್ವತಂತ್ರಳಾಗಿದ್ದಳು. ವೇದ, ಆಗಮ, ಉಪನಿಷತ್ತು ಪುರಾಣ ಹೀಗೆ ಎಲ್ಲ 64 ವಿದ್ಯೆಗಳನ್ನು ಕಲಿಯುವ ಅವಕಾಶ ಆಕೆಗಿತ್ತು. ಖುದ್ದು ಆಕೆಯ ಪಾಲಕರಿಗೂ ಕೂಡ ಆಕೆಯನ್ನು ನಿಯಂತ್ರಿಸುತ್ತಿರಲಿಲ್ಲ. ತನ್ನ ಬದುಕಿನ ಯಾವುದೇ ನಿರ್ಣಯಗಳಿಗೆ ಆಕೆ ಬಾಧ್ಯಳಾಗಿದ್ದಳು. ಇದಕ್ಕೆ ಸಾಕ್ಷಿಯಾಗಿ ನಾವು ಅಂದಿನ ಕಾಲದ ಹೆಣ್ಣು ಮಕ್ಕಳು ಶಾಸ್ತ್ರಾರ್ಥಗಳಲ್ಲಿ, ನಿರ್ಣಾಯಕ ಪಾತ್ರ ವಹಿಸಿದ ಲೋಪ ಮುದ್ರಾ, ಅಪಾಲ, ಗಾರ್ಗಿ, ಮೈತ್ರೇಯಿ, ವಿಶ್ವವರರಂತಹ ರಿಷಿಕುಮಾರಿಯರನ್ನು ನೋಡಬಹುದು. ಭಗವಾನ್ ಶಂಕರ ಮತ್ತು ಮಂಡನ ಮಿಶ್ರರ ನಡುವೆ ನಡೆದ ಶಾಸ್ತ್ರಾರ್ಥದಲ್ಲಿ ಮಂಡನ ಮಿಶ್ರ ಪತ್ನಿ ಉಭಯ ಭಾರತಿ ದೇವಿ ನಿರ್ಣಾಯಕಿಂಯಾಗಿ ಕಾರ್ಯನಿರ್ವಹಿಸಿರು ವುದನ್ನು ಕೂಡ ನಾವು ಕೇಳಿದ್ದೇವೆ.

ಈ ಕಾಲಘಟ್ಟದಲ್ಲಿ ಕೆಲ ಮಹಿಳೆಯರು ತಮಗೆ ಇದ್ದ ಸ್ವಾತಂತ್ರ್ಯವನ್ನು ಬಹುಮಟ್ಟಿಗೆ ದುರುಪಯೋಗ ಪಡಿಸಿಕೊಂಡರು ಎಂಬ ಕಾರಣಕ್ಕಾಗಿ ಮಧ್ಯಯುಗದಲ್ಲಿ ಇವರ ಮೇಲೆ ಕೆಲ ನಿರ್ಬಂಧಗಳನ್ನು ಹೇರಲಾಯಿತು. ಅದೇ ಸಮಯದಲ್ಲಿ ಭಾರತ ದೇಶಕ್ಕೆ ವಿದೇಶಿ ಆಕ್ರಮಣಕಾರರು ದಂಡೆತ್ತಿ ಬಂದ ಕಾರಣ ಈ ನಿರ್ಬಂಧಗಳು ಹೆಣ್ಣು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಸರಿ ಎಂಬ ಭಾವ ಜನರಲ್ಲಿ ತಲೆದೋರಿತು.. ಪರಿಣಾಮವಾಗಿ ಹೆಣ್ಣು ಮಕ್ಕಳು ಸಾಮಾಜಿಕ ಸಂಕೋಲೆಗಳಲ್ಲಿ ಬಂದಿಯಾಗಬೇಕಾಯಿತು. ಕುಟುಂಬದ ಧಾರ್ಮಿಕ ವಿಧಿ ವಿಧಾನಗಳಲ್ಲಿ ಆಕೆ ತನ್ನ ಪತಿಯ ಜೊತೆಗೆ ಪಾಲ್ಗೊಳ್ಳಬಹುದಾದರೂ ಶಿಕ್ಷಣ, ಅಧ್ಯಯನ, ಬದುಕು, ಸಂಗಾತಿಯನ್ನು ಆಯ್ದುಕೊಳ್ಳುವ ಆಕೆಯ ಹಕ್ಕುಗಳಿಗೆ ಚ್ಯುತಿ ಉಂಟಾಯಿತು. ಮುಖ್ಯವಾಗಿ ಪುರುಷನ ಆಧೀನದಲ್ಲಿ ಹೆಣ್ಣು ದಾಸ್ಯದ ಬದುಕನ್ನು ಅಪ್ಪಿಕೊಳ್ಳಬೇಕಾಯಿತು. ತನ್ನ ಎದುರಿಗಿರುವ ವ್ಯಕ್ತಿಯನ್ನು ಯಜಮಾನ ಎಂದು ಒಪ್ಪಿಕೊಳ್ಳಬೇಕಾದರೆ ಆಕೆ ಆತನ ಸೇವಕಿ ಎಂಬುದು ಅನಿವಾರ್ಯದ ಒಪ್ಪಿಗೆಯಾಯಿತು. ಪುರುಷಸ್ವಾಮ್ಯದ ಮುಂದೆ ಸ್ತ್ರೀತ್ವದ ಪರಿಭಾಷೆ ಮಂಡಿಯೂರಿ ಅಡಿಯಾಳಾಯಿತು ಎಂದರೆ ತಪ್ಪಿಲ್ಲ.

ನಂತರ ಬಂದದ್ದೇ ಶರಣ ಸಂಸ್ಕೃತಿಯ ಸುವರ್ಣ ಯುಗ ಶರಣರ ಕಾಲ 12ನೇ ಶತಮಾನ. ಈ ಸಮಯದಲ್ಲಿ ಸಾಮಾಜಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಬಹುದೊಡ್ಡ ಬದಲಾವಣೆಗಳನ್ನು ವಿಶ್ವಗುರು, ಜಗಜ್ಯೋತಿ, ಎಂದೆಲ್ಲಾ ಹೆಸರಾದ ಕ್ರಾಂತಿಯೋಗಿ ಅಣ್ಣ ಬಸವಣ್ಣನವರ ನೇತೃತ್ವದಲ್ಲಿ ಶರಣ ಸಂಕುಲವು ಅನುಭವ ಮಂಟಪದಲ್ಲಿ

ಯಾವುದೇ ರೀತಿಯ ಜಾತಿ, ಲಿಂಗ, ಮತಗಳ ಭೇದವಿಲ್ಲದೆ 'ಮಾನವ ಜಾತಿ ತಾನೊಂದೇ ವಲಂ' ಎಂಬ ವಿಶ್ವ ಬಂಧುತ್ವದ, ವಿಶ್ವ ಭ್ರಾತೃತ್ವದ ಭಾವದ ಅಡಿಯಲ್ಲಿ ಕಾಯಕ, ದಾಸೋಹ, ಲಿಂಗ ನಿಷ್ಠೆಗಳನ್ನು ಬದುಕಿನ ಮೂಲ ಧ್ಯೇಯಗಳನ್ನಾಗಿ ಬದುಕಿದರು.

ಈ ಸಮಯದಲ್ಲಿ ಅದುವರೆಗೂ ಪುರುಷದಾಸ್ಯದ ಸಂಕೋಲೆಯಲ್ಲಿ ತಮ್ಮೆಲ್ಲ ಮನದ ಭಾವನೆಗಳನ್ನು ಬರಡಾಗಿಸಿಕೊಂಡ ಮಹಿಳೆಯರು ಸ್ವಾತಂತ್ರ್ಯದ ತಿಳಿ ಗಾಳಿಯನ್ನು ಸವಿದರು. ಕಲ್ಲರಳಿ ಹೂವಾದ ಸುಣ್ಣದ ಕಲ್ಲಿನಂತೆ ತಮ್ಮೆಲ್ಲ ಮನದ ಭಾವಗಳನ್ನು ಬಿಚ್ಚಿ ವಚನಗಳ ಮೂಲಕ ಪ್ರಸ್ತುತ ಪಡಿಸಿದರು. ವೀರ ವಿರಾಗಿಣಿಯಾದ ಅಕ್ಕಮಹಾದೇವಿ ತಾಯಿ, ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಆಯ್ದಕ್ಕಿ ಲಕ್ಕಮ್ಮ ಕದಿರ ರೆಮ್ಮವ್ವೆ ಕನ್ನಡಿ ಕಾಯಕದ ರೆಮ್ಮವ್ವೆ, ಕೇತಲದೇವಿ, ಗೊಗ್ಗವ್ವೆ ಬಂತಾದೇವಿ ದುಗ್ಗಳೆ ಮುಂತಾದ 33ಕ್ಕೂ ಹೆಚ್ಚು ವಚನಕಾರ್ತಿಯರು ಅತ್ಯಂತ ನಿರ್ಭಿಡೆಯಿಂದ ಆದರೆ ಅಷ್ಟೇ ಸರಳ ಹಾಗೂ ಮುಕ್ತ ಮನದಿಂದ ವಚನಗಳನ್ನು ರಚಿಸಿದರು. ಅವರ ವಚನಗಳಲ್ಲಿ ಹೆಚ್ಚು ಧೈರ್ಯ ಚಲ ನಿಷ್ಠುರತೆ ಆದನ್ಯಾತ್ಮ ಅಭಿಮಾನ ವಿಡಂಬನೆ ಹಾಗೂ ಕಟು ಟೀಕೆಗಳು ಮುಕ್ತವಾಗಿ ಮೂಡಿಬಂದಿವೆ. ಶರಣ ಸಂಸ್ಕೃತಿಯ ಹೆಣ್ಣು ಮಕ್ಕಳು ಸ್ತ್ರೀ ಸಹಜ ಮಾತೃತ್ವ, ಮಮತೆ, ದಯಾಪರತೆಯ ಜೊತೆ ಜೊತೆಗೆ ನೇರ ನಿಷ್ಠುರವಾದ ನುಡಿಗಳಿಗೂ ಹೆಸರಾಗಿದ್ದರು.

ಅಮೆರಿಕಾದ ಖ್ಯಾತ ಸಮಾಜಶಾಸ್ತ್ರಜ್ಞೆ ಶೋ ವಾಲ್ತರ್ ಹೇಳುವ ಪ್ರಕಾರ 19ನೇ ಶತಮಾನದಲ್ಲಿ ಇಡೀ ಜಗತ್ತಿನ ಮಹಿಳಾ ಸಂಕುಲದಲ್ಲಿ ಫೆಮಿನೈನ್, ಫೆಮಿನಿಸ್ಟ್ ಹಾಗೂ ಫೆಮಿನಾ ಎಂಬ ಮೂರು ಬಗೆಯ ಸ್ತ್ರೀಯರ ಗುಂಪುಗಳನ್ನು ಕಾಣಬಹುದಾಗಿತ್ತು. 1840 ರಿಂದ 1880ರ ಕಾಲಘಟ್ಟದಲ್ಲಿ ಫೆಮಿನೈನ್ ಎಂದು ಕರೆಯಲ್ಪಡುವ ಸ್ತ್ರೀಯರು ಪುರುಷರನ್ನು ಅನುಕರಿಸುತ್ತಿದ್ದರು. ಪುರುಷರ ನಾಮಧೇಯಗಳನ್ನು ಇಟ್ಟುಕೊಂಡು ಬರೆಯುವ, ಚಿತ್ರಗಳನ್ನು ರಚಿಸುವ ಪುರುಷರ ವಸ್ತ್ರಗಳನ್ನು ಧರಿಸುವ ಮೂಲಕ ಅವರನ್ನು ಅನುಕರಿಸುವ ರೀತಿಯಲ್ಲಿ ಬದುಕುತ್ತಿದ್ದರು.

1880 ರಿಂದ 1920ರ ಕಾಲ ಘಟ್ಟದಲ್ಲಿ ಹೆಣ್ಣು ಮಕ್ಕಳು ಸಾಮಾನ್ಯವಾಗಿ ಪುರುಷರದ್ದು ಎಂದು ಕರೆಯಲ್ಪಡುವ ಎಲ್ಲ ರೀತಿಯ ಪುರುಷ ಮಾನದಂಡಗಳನ್ನು ತಿರಸ್ಕರಿಸಿ ತಮ್ಮದೇ ಆದ ಅಸ್ಮಿತೆಯನ್ನು ತೋರ್ಪಡಿಸುವ ರೀತಿಯಲ್ಲಿ ಬದುಕಲು ಆರಂಭಿಸಿದರು. ಇವರನ್ನು ಸಮಾಜ ಫೆಮಿನಿಸ್ಟ್ ಎಂದು ಕರೆಯಿತು.

ಮುಂದೆ 1920 ರಿಂದ ಮುಂದೆ 1960 ರವರೆಗೆ ಹೊಸ ರೀತಿಯ ಫೆಮಿನ ಎಂಬ ಸ್ತ್ರೀ ಸಮುದಾಯ ಹುಟ್ಟಿಕೊಂಡಿತು. ಸ್ತ್ರೀತ್ವದ ಮಹತ್ವಕ್ಕೆ ಹೊಸ ಭಾಷೆಯನ್ನು ಬರೆದ ಈ ಸಮುದಾಯವು ಹೆಣ್ಣು ಮಕ್ಕಳು ಪುರುಷರ ಮೇಲೆ ಹೊಂದಿದ್ದ ಎಲ್ಲ ರೀತಿಯ ಪರಾವಲಂಬನವನ್ನು ಮೀರಿ ಬೆಳೆಯುವ ನಿಟ್ಟಿನಲ್ಲಿ ತಮ್ಮದೇ ಆದ ರೀತಿಯ ಬದುಕನ್ನು ಕಂಡುಕೊಂಡರು. ಇವರು ಪುರುಷ ದ್ವೇಷಿಗಳಾಗದೆ, ಆದರೆ ಅದೇ ಸಮಯದಲ್ಲಿ ಪುರುಷರೊಂದಿಗೆ ಹೊಂದಾಣಿಕೆಯ ಬದುಕನ್ನು ನಡೆಸುತ್ತಾ ತಮ್ಮ ವೈಯುಕ್ತಿಕ ನಿಲುವುಗಳಿಗೆ ಬದ್ಧರಾಗಿ ನಿಂತರು.

19ನೇ ಶತಮಾನದಲ್ಲಿ ಸ್ತ್ರೀ ಸಮುದಾಯದಲ್ಲಿ ಆದ ಈ ಬದಲಾವಣೆಯನ್ನು ಸುಮಾರು ಎಂಟು ಶತಮಾನಗಳ ಹಿಂದೆಯೇ ನಾವು ಅಣ್ಣ ಬಸವಣ್ಣನವರ ಶರಣ ಸಂಸ್ಕೃತಿಯ ಕಾಲಘಟ್ಟದಲ್ಲಿ ನೋಡಬಹುದಾಗಿತ್ತು ಎಂದು ಓರ್ವ ಪಾಶ್ಚಾತ್ಯ ಸಮಾಜ ಶಾಸ್ತ್ರಜ್ಞ ಶೋ ವಾಲ್ತರ್ ಅಭಿಪ್ರಾಯ ಪಡುತ್ತಾಳೆ ಎಂದರೆ ಶರಣ ಸಂಸ್ಕೃತಿಯ ಕಾಲದ ಸ್ತ್ರೀಶಕ್ತಿಯ ಉಚ್ಛ್ರಾಯ ಸ್ಥಿತಿಯನ್ನು ನಾವು ಅರಿತುಕೊಳ್ಳಬಹುದು ಅಲ್ಲವೇ.

ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವ ಆತ್ಮ
ಹೆಣ್ಣು? ಅಲ್ಲ ಗಂಡೂ ಅಲ್ಲ
ಕಾಣಾ ರಾಮನಾಥ

ಎಂಬ ಜೇಡರ ದಾಸಿಮಯ್ಯನವರ ವಚನವು ದೇಹದ ಲಕ್ಷಣಗಳ ಮೇಲೆ ಆಧಾರಿತ ಲಿಂಗ ತಾರತಮ್ಯವನ್ನು ಪ್ರಶ್ನಿಸುತ್ತದೆ. ಶರಣರು ಪುರುಷರಷ್ಟೇ ಮಹಿಳೆಯರು ಸಬಲರು ಎಂದು ಸ್ತ್ರೀ ಪುರುಷ ಸಮಾನತೆಯನ್ನು ಸಾರಿದರು. ಶರಣ ಸಂಸ್ಕೃತಿಯಲ್ಲಿ ದಾಂಪತ್ಯ ಎಂಬುದು ಸಹಬಾಳ್ವೆಯ ಕುರುಹಾಗಿದ್ದು ದಂಪತಿಗಳು ಸಮಾನ ಸ್ಥಾಯಿ ಭಾವವನ್ನು ಹೊಂದಿದ್ದರು ಎಂಬುದಕ್ಕೆ ತನ್ನ ಪತಿ ಶರಣ ಆಯ್ದಕ್ಕಿ ಮಾರಯ್ಯನವರು ತಂದ ಹೆಚ್ಚಿನ ಅಕ್ಕಿಯನ್ನು ಕಂಡು

ಆಸೆಯೆಂಬುದು ಅರಸಂಗಲ್ಲದೇ ಶಿವ ಭಕ್ತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇಕೆ?
ಇದನ್ನು ಈಶ್ವರನು ಒಪ್ಪ

ಎಂದು ಪತಿಗೆ ತಿಳಿ ಹೇಳಿ ದಿಟ್ಟತನವನ್ನು ಮೆರೆದ ಆಯ್ದಕ್ಕಿ ಲಕ್ಕಮ್ಮ ಆ ಅಕ್ಕಿಯನ್ನು ಮರಳಿಸಲು ಪತಿಗೆ ಹೇಳುತ್ತಾಳೆ. ಆಗ ತುಸು ಹಿಂಜರಿದ ತನ್ನ ಪತಿಗೆ 'ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೇ' ಎಂದು ಹೇಳುವ ದಾಷ್ಟಿಕತೆಯನ್ನು ತೋರುತ್ತಾಳೆ. ಇದು ಶರಣ ಸಂಸ್ಕೃತಿಯಲ್ಲಿರುವ ದಾಂಪತ್ಯದಲ್ಲಿ ಪತಿ-ಪತ್ನಿಯರ ಸಮಾನತೆಯ ಲಕ್ಷಣವಾಗಿತ್ತು.

ಇನ್ನು ನೂಲುವ ಕಾಯಕದ ಕದಿರ ರೆಮ್ಮವ್ವೆ

ನಾ ತಿರುಗುವ ರಾಟೆಯ ಕುಲ ಜಾತಿ ಕೇಳಿರಣ್ಣ
ಅಡಿಯ ಹಲಗೆ ಬ್ರಹ್ಮ ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರ ಕರ್ಣ
ಅರಿವೆಂಬ ಕದಿರು ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿಸುತ್ತಿತ್ತು ನೂಲು ಕದಿರು ತುಂಬಿತ್ತು
ರಾಟೆಯ ತಿರುವಲಾರೆ ನನ್ನ ಗಂಡ ಕೊಟ್ಟಿಹ ಇನ್ನೇವೇ
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ

ಎಂದು ತನ್ನ ಕಾಯಕದಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರನ್ನು ಸಮನ್ವಯಗೊಳಿಸಿ ಆಧ್ಯಾತ್ಮ ಬೆರೆಸಿದ ಬೆಡಗಿನ ವಚನಗಳನ್ನು ರಚಿಸಿದ್ದು ಕುಲ ಜಾತಿಯ ಕುರಿತು ಪ್ರಶ್ನಿಸುವವರ ಮುಖದ ಮೇಲಿನ ನೀರನ್ನು ಇಳಿಸಿದ್ದಾಳೆ.

ಬಸವಕಲ್ಯಾಣವನ್ನು ತೊರೆದು ಕಪ್ಪಡಿ ಸಂಗಮದಲ್ಲಿ ನೆಲೆಸಿದ್ದ ಬಸವಣ್ಣನವರ ಆಶಯದಂತೆ ಅವರೊಂದಿಗೆ ಸಂಗಮಕ್ಕೆ ಬಂದು ನೆಲೆಸಲು ನೀಲಾಂಬಿಕೆ ತಾಯಿಯನ್ನು ಹಡಪದ ಅಪ್ಪಣ್ಣನವರು ಕೇಳಿಕೊಂಡಾಗ ತಾಯಿ ನೀಲಾಂಬಿಕೆ

ನೋಡು ನೋಡು ನೋಡು ನೋಡು ಲಿಂಗವೇ
ನೋಡು ಬಸವಯ್ಯನವರು ಮಾಡಿದಾಟುವ
ಅಲ್ಲಿಗೆ ನಮ್ಮನ್ನು ಬರಲು ಹೇಳಿದರಂತೆ
ಅಲ್ಲಿರ್ಪ ಸಂಗಯ್ಯ ಇಲ್ಲಿಲ್ಲವೇ
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವೇಕೆ ?
ಬಲ್ಲಿದ ಶರಣರಿಗೆ ಇದು ತರವೇ

ಎಂದು ತಮ್ಮ ಎದೆಯ ಮೇಲಿನ ಲಿಂಗವನ್ನು ತೋರಿ ಹೇಳುವ ದಾಷ್ಟಿಕತೆ ಅಂದಿನ ಸ್ತ್ರೀಯರಿಗೆ ಇತ್ತು ಎಂಬುದಕ್ಕೆ ಇದಕ್ಕಿಂತ ಏನು ಹೇಳಬೇಕು. ಅಂದಿನ ಕಾಲದ ಶಿವಶರಣೆಯರು ತಮ್ಮ ಕೊರಳಲ್ಲಿರುವ ಲಿಂಗವನ್ನು ಶರಣಪತಿ ಎಂದು ಒಪ್ಪಿಕೊಂಡವರು. ಇಹದ ಗಂಡರನ್ನು ಒಯ್ದು ಒಲೆಯಲಿ ಇಕ್ಕು ಎಂದು ಹೇಳಿದ್ದು ವೀರ ವಿರಾಗಿಣಿ ಅಕ್ಕಮಹಾದೇವಿ ತಾಯಿ.

ಅಂದಿನ ಸಾಮಾಜಿಕ ಕಟ್ಟಳೆಗಳನ್ನು ಮೀರಿ ತನ್ನ ಬದುಕಿನ ಧ್ಯೇಯ ಚನ್ನ ಮಲ್ಲಿಕಾರ್ಜುನನನ್ನು ಒಂದಾಗುವ ಆಶ್ರಯವನ್ನು ಪೂರೈಸಿಕೊಂಡ, ಇಡೀ ಜಗತ್ತಿಗೆ ಅಕ್ಕನಾಗಿ ಸ್ತ್ರೀ ಕುಲದ ಉದ್ಧಾರವನ್ನು ಮಾಡಿದ ಹೆಣ್ಣು ಮಗಳು ಅಕ್ಕಮಹಾದೇವಿ ತಾಯಿ. ಆಧ್ಯಾತ್ಮದ ಔನ್ನತ್ಯ ಶಿಖರವನ್ನೇರಿದ ಕದಳಿಯ ಕರ್ಪೂರ ವೈರಾಗ್ಯನಿಧಿ ಅಕ್ಕ ಶರಣ ಸಂಸ್ಕೃತಿಯ ಸ್ತ್ರೀಪರ ಸಂವೇದನೆಗಳ ಅದ್ಭುತ ವಚನಗಳ ಕರ್ತೃ.

ಇನ್ನು ಈ ಸಾಲಿನಲ್ಲಿ ಶರಣ ಸಂಸ್ಕೃತಿಯ ಗಂಗಮ್ಮ ಆವ ಕಾಯಕ ಮಾಡಿದರು ಒಂದೇ ಕಾಯಕ ಎಂದು ಹೇಳಿದರೆ,

ಬತ್ತವನ್ನು ಕುಟ್ಟುವ ಕಾಯಕದ ಕೊಟ್ಟಣದ ಸೋಮವ್ವ ಹದ ತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿ ಇಲ್ಲ ವ್ರತ ಹೀನನ ಬೆರೆಯ ನರಕವಲ್ಲದೆ ಮುಕ್ತಿ ಇಲ್ಲ ಎಂದು ಕಾಯಕದ ದೃಷ್ಟಾಂತವನ್ನು ಹೇಳಿದ್ದಾರೆ.

ಓರ್ವ ಪ್ರಾಮಾಣಿಕ ಸತ್ಯಸಾಧಕಿಯಾಗಿದ್ದ ಶರಣಿ ಸತ್ಯಕ್ಕ

ಅರ್ಚನೆ ಪೂಜೆ ನೇಮವಲ್ಲ ಮಂತ್ರ ತಂತ್ರ ನಿಯಮವಲ್ಲ ಧೂಪ ದೀಪ ಆರತಿ ನೇಮವಲ್ಲ
ಪರಸ್ತ್ರೀಪರ ದೈವಂಗಳಿಗೆರೆಗ ಲೇಕೆದಿಪ್ಪುದೆ ನೇಮ
ಶಂಬುಜಕ್ಕೇಶ್ವರನಲ್ಲಿ ಇವನು ಕಾಣೆ
ರನ್ನ ಇವೆ ನಿತ್ಯ ನಿಯಮ

ಎಂದು ಡಾಂಭಿಕ ಭಕ್ತಿಯನ್ನು ತೋರುವ ಭಕ್ತರಿಗೆ ನೇರವಾಗಿ ಉತ್ತರಿಸಿದ್ದಾಳೆ.

ಹೀಗೆ ಸಮಾನತೆ, ಸ್ವಾತಂತ್ರ್ಯ,ಗೌರವ, ನಂಬಿಕೆ, ವಿಶ್ವಾಸಗಳ ಹಿನ್ನೆಲೆಯಲ್ಲಿ ಶರಣ ಸಂಸ್ಕೃತಿಯಲ್ಲಿ ಸ್ತ್ರೀ ಸಂವೇದನೆಗೆ ಹೆಚ್ಚಿನ ಮಹತ್ವವಿದೆ. ಪ್ರತಿಯೊಬ್ಬ ವಚನಕಾರ್ತಿಯು ತನ್ನ ಸಂವೇದನೆಗಳನ್ನು ಅತ್ಯಂತ ಸಮರ್ಥವಾಗಿ ವಚನಗಳ ಮೂಲಕ ಹಂಚಿಕೊಂಡಿದ್ದು ಅವರ ದಿಟ್ಟ, ಸ್ಪಷ್ಟ ವೈಚಾರಿಕ ನಿಲುವನ್ನು ತೋರ್ಪಡಿಸುತ್ತದೆ.



ವೀಣಾ ಹೇಮಂತ್ ಗೌಡ ಪಾಟೀಲ್

# ಯೋಗದ ಮೂಲಕ ಪ್ರತಿಯೊಬ್ಬರು ಮಾನಸಿಕವಾಗಿ ಸದೃಢರಾಗಬೇಕು : ಡಾ.ಮಹೇಶ್ವರ ಸ್ವಾಮಿ







**ದಿ ಹಂಪಿ ವರ್ಲ್ಡ್ ನ್ಯೂಸ್**

**ಹಗರಿಬೊಮ್ಮನಹಳ್ಳಿ:** ಪ್ರತಿಯೊಬ್ಬ ವ್ಯಕ್ತಿಗಳು ಯೋಗದ ಮೂಲಕ ಮಾನಸಿಕ ಹಾಗೂ ದೈಹಿಕ ವಾಗಿ ಸದೃಢರಾಗಬೇಕೆಂದು ಮಹೇಶ್ವರ ಸ್ವಾಮಿಗಳು ಅಭಿಪ್ರಾಯಪಟ್ಟರು.

ಅವರು ತಾಲೂಕಿನ ತಂಬ್ರಹಳ್ಳಿ ಗ್ರಾಮದಲ್ಲಿ ಆಯುಷ್ಮಾನ್ ಇಲಾಖೆ ಹಾಗೂ ದೇವಿಪ್ರಸಾದ್ ಚಾ-ರಿಟೇಬಲ್ ಟ್ರಸ್ಟ್ ನವರು ಆಯೋಜಿಸಿದ್ದ 10 ದಿನಗಳ ಯೋಗ ಕಾರ್ಯಕ್ರಮದ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದರು. ಮುಂದುವರೆದು ಮಾತನಾಡಿದ ಅವರು ಆಧುನಿಕ ದಿನಮಾನಗಳಲ್ಲಿ ಜನರು ಒತ್ತಡದ ಜೀವನವನ್ನು ಎದುರಿಸುತ್ತಿದ್ದು, ಆ ಒತ್ತಡದಿಂದ ಮುಕ್ತರಾಗಿರಲು ದೈನಂದಿನ ಜೀವನದಲ್ಲಿ ಯೋಗವು ಅತ್ಯಂತ ಅವಶ್ಯವಾದದ್ದು ಆಗಿದೆ ಎಂದರು. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಅಕ್ಕಿ ತೋಟೇಶ್ ಅವರು ಮಾತನಾಡಿ ಯೋಗವನ್ನು ಕೇವಲ ಯೋಗ ದಿನಾಚರಣೆಯಂದು ಮಾಡದೆ, ಪ್ರತಿಯೊಬ್ಬರು ಎಡೆಬಿಡದೆ ನಿರಂತರವಾಗಿ ಅದನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ರೋಗ ಮುಕ್ತರಾಗಬಹುದು ಹಾಗೂ ಸಂತಸದ ಜೀವನವನ್ನು ಕಾಣಬಹುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಪೊಲೀಸ್ ಠಾಣೆ ಸಬ್ ಇನ್ಸ್ಪೆಕ್ಟರ್ ನಾಗರಾಜ್ ಜಿಲ್ಲಾ ಯೂನಿಯನ್ ಬ್ಯಾಂಕ್ ನ ನಿರ್ದೇಶಕರಾದ ಸುರೇಶ್, ಆಯುಷ್ಮಾನ್ ಇಲಾಖೆಯ ಅಧಿಕಾರಿಗಳು ಗ್ರಾಮದ ಪ್ರಮುಖರು ಹಾಗೂ ಯೋಗ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮವು 10 ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.

# ಸುಳ್ಳು ಜಾತಿ ಪ್ರಮಾಣ ಪತ್ರ; ಕ್ರಮಕ್ಕೆ ಡಿಎಸ್ಎಸ್ ಆಗ್ರಹ



**ದಿ ಹಂಪಿ ವರ್ಲ್ಡ್ ನ್ಯೂಸ್**

**ಕೂಡ್ಲಿಗಿ:** ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದುಕೊಂಡವರು ಹಾಗೂ ಅದನ್ನು ಕೊಟ್ಟಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಡಿಎಸ್ಎಸ್ ಸಂಘಟನೆಯ ಕೂಡ್ಲಿಗಿ ತಾಲ್ಲೂಕು ಸಮಿತಿ ಆಗ್ರಹಿಸಿದೆ.

ಪಟ್ಟಣದ ತಾಲೂಕು ಕಚೇರಿಯಲ್ಲಿ ಮಂಗಳವಾರ ಡಿಎಸ್ಎಸ್ ಜಿಲ್ಲಾ ಹಾಗೂ ತಾಲೂಕು ಪದಾಧಿಕಾರಿಗಳು ತಾಹಶೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು. ತಾಲೂಕಿನ ಬಡೇಲಡಕು ಗ್ರಾಮದ ಇಂದಿರಾ ಗುಂಡಪಲ್ಲಿ ಗಂಡ ವಿ ಅಪ್ಪಾಜಿ ಎಂಬುವವರು ಹಿಂದೂ ಸುಡಗಾಡು ಸಿದ್ದರು ಜಾತಿಗೆ ಸೇರಿದ ಮಹಿಳೆಗೆ ಹಲವು ಆಮಿಷಗಳಿಗೆ ಒಳಗಾಗಿ ಪರಿಶಿಷ್ಟ ಜಾತಿಯ ಪ್ರವರ್ಗ ಎ ಗುಂಪಿನ ಮಾದಿಗ ಜಾತಿ ಪ್ರಮಾಣ ಪತ್ರ ನೀಡಿರುತ್ತಾರೆ. ಮತ್ತು ನಾಡಕಛೇ-ರಿಯಲ್ಲಿನ ಎಲ್ಲಾ ಸೇವೆಗಳಿಗೆ 21 ದಿನಗಳ ಕಾಲಮಿತಿಯಿದ್ದರೂ 2 ತಿಂಗಳು ಆವಧಿಯಲ್ಲಿ ಪ್ರಮಾಣ ಪತ್ರ ಅನುಮೋದನೆಯಾಗಿರುತ್ತದೆ.

ಅದೂ ಅಲ್ಲದೆ ಆ ಗ್ರಾಮದ ಗ್ರಾಮಲೆಕ್ಕಾಧಿಕಾರಿಗಳು ಈ ಅರ್ಜಿಯನ್ನು ತಿರಸ್ಕ-ರಿಸಿರುತ್ತಾರೆ. ಕೂಡ್ಲಿಗಿ ಹೊಬಳಿ ಕಂದಾಯ ನಿರೀಕ್ಷಕರು ತಮ್ಮ ಪ್ರಭಾವ ಮತ್ತು ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವ ಮೂಲಕ ಪರಿಶಿಷ್ಟ ಜಾತಿಯ ಮಾದಿಗ ಸಮುದಾಯದ ಮಿಸಲಾತೀಯನ್ನು ಕಸಿದುಕೊಂಡು ಬೇರೆ ಜಾತಿಯವರಿಗೆ ನೀಡುವ ಪಿತೂರಿ ನಡೆಸಿದ್ದಾರೆಂದು ಹಾಗೂ ಅಲ್ಲಿನ ಸಾರ್ವಜನಿಕ ರೊಂದಿಗೆ ಅನುಚಿತ ವರ್ತನೆ ತೋರುತ್ತಿದ್ದಾರೆ.

ಹಾಗಾಗಿ ಈ ಅಧಿಕಾರಿಯಿಂದ ಮಾದಿಗ ಸಮುದಾಯಕ್ಕೆ ಅನ್ಯಾಯ ಮಾಡುವ ಹೆಚ್ಚಿನ ಸಂಭವವಿದೆ ಹಾಗಾಗಿ ಇವರನ್ನು ಈ ಕೂಡಲೇ ಈ ಹುದ್ದೆಯಿಂದ ಅಮಾನತು ಮಾಡಬೇಕೆಂದು ಹಾಗೂ ಸುಳ್ಳು ಜಾತಿ ಪ್ರಮಾಣಪತ್ರ ವನ್ನು ಪಡೆದುಕೊಂಡಿರುವಂತ ಇಂದಿರಾ ಗುಂಡಪಲ್ಲಿ ಇವರ ವಿರುದ್ಧ ಸಹ ಕಾನೂನು ಕ್ರಮ ಜರುಗಿಸಬೇಕು ಹಾಗೂ ಈ ಭಾಗದ ಮಾದಿಗ ಸಮುದಾಯದವರನ್ನು ಹಾಗೂ ಅವರ ಹಕ್ಕುಗಳನ್ನು ರಕ್ಷಿಸಬೇಕು. ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಕೊಡುವುದರ ಮೂಲಕ ಶತಮಾನಗಳಿಂದ ಶೋಷಣೆಗೊಳಗಾಗಿರುವ ಅಸ್ಪೃಶ್ಯ ಸಮುದಾಯಗಳನ್ನು ಮೀಸಲಾತಿಯಿಂದ ವಂಚಿಸುವ ಹುನ್ನಾರ ನಡೆದಿದೆ. ಸರಿಯಾದ ರೀತಿಯಲ್ಲಿ ದಾಖಲೆಗಳನ್ನು ಪರಿಶೀಲಿಸದೆ ಹೀಗೆ ಮಾಡುತ್ತಿದ್ದಾರೆ. ಇಂತಹ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಡಿಎಸ್ಎಸ್ ಜಿಲ್ಲಾ ಸಂಚಾಲಕ ಎಸ್ ದುರುಗೇಶ್, ಜಿಲ್ಲಾ ಸಂಘಟನಾ ಸಂಚಾಲಕ ಕಂದಗಲ್ ಪರಶುರಾಮ್, ಡಿ ಹನುಮೇಶ್ ಗೆದ್ದಲಗಟ್ಟೆ, ತಾಲೂಕು ಸಂಚಾಲಕ ಬಡೆಲಡಕು ದುರುಗೇಶ್, ತಾಲೂಕು ಸಂಘಟನಾ ಸಂಚಾಲಕರಾದ ಚೌಡಾಪುರ ಬಸವರಾಜ್, ಕಾನಾಮಡುಗು ಎನ್ ಪಕೀರಪ್ಪ, ಕೂಡ್ಲಿಗಿ ಬಿ ಮಹೇಶ,ಕೆ ಮೂಗಪ್ಪ, ಹೊಸಹಳ್ಳಿ ಕರಬಸಪ್ಪ, ಐಗಳ ಮಲ್ಲಾಪುರ ಹೆಚ್ ಜಿತೇಂದ್ರ, ರಮೇಶ್, ಕೂಡ್ಲಿಗಿ ಅಜಯ್ ಕುಮಾರ್, ಹಿರೇ ಹೆಗ್ಡಾಳ್ ಪಕೀರಪ್ಪ, ಕೂಡ್ಲಿಗಿ ಇ.ದುರುಗಪ್ಪ, ಜರ್ಮಲೆ ನಾಗರಾಜ್ ಸೇರಿದಂತೆ ಡಿಎಸ್ಎಸ್ ಪದಾಧಿಕಾ-ರಿಗಳು, ಮುಖಂಡರು ಹಾಜರಿದ್ದರು.

# ಕಂತು ಪಾವತಿ,ಲೋನ್, ಮ್ಯಾಚುರಿಟಿ ಸಂಪೂರ್ಣ ಮಾಹಿತಿ ನೀಡುವ ಯಾಪ್‌ಗಳ ಸರಳೀಕೃತ ಅಗತ್ಯ



**ದಿ ಹಂಪಿ ವರ್ಲ್ಡ್ ನ್ಯೂಸ್**

**ಗಂಗಾವತಿ:** ಭಾರತೀಯ ಜೀವ ವಿಮಾ ನಿಗಮದ ಪ್ರತಿನಿಧಿಗಳಿಗೆ ಗ್ರಾಹಕರ ಮಾಹಿತಿಯನ್ನು ಬೆರಳಿನ ತುದಿಯಲ್ಲಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ಎಲ್ಐಸಿ ಸಂಸ್ಥೆ ಸೂಪರ್ ಸೆಲ್ ಸಾಟಿ ಎನ್ನುವ ಆಪ್ ಅನ್ನು ಅಭಿವೃದ್ಧಿಪಡಿಸಿದ್ದು, ಇದರಲ್ಲಿ ಗ್ರಾಹಕರ ಸಂಪೂರ್ಣ ಮಾಹಿತಿ ಲಭ್ಯವಾಗುತ್ತದೆ.

ನಂತರ ಇದರಂತೆ ಖಾಸಗಿ ಕಂಪನಿಗಳು ಸಹ ಎಲ್ಐಸಿ ಗ್ರಾಹಕರ ಸಂಪೂರ್ಣ ಮಾಹಿತಿಯನ್ನು ಪ್ರತಿನಿಧಿವಾರು ಪಡೆದುಕೊಳ್ಳಲು ಅವಕಾಶ ಕಲ್ಪಿಸಿದ್ದು, ಕಳೆದ ಎರಡು ತಿಂಗಳಿನಿಂದ ಎಲ್ಐಸಿ ಯಾಪ್ ಗಳನ್ನು ಬಂದ್ ಮಾಡಲಾಗಿದ್ದು ಇದರಿಂದ ಎಲ್ಐಸಿ ಪ್ರತಿನಿಧಿಗಳು ಗ್ರಾಹಕರ ಮಾಹಿತಿಗಳ ಪಾವತಿ ರಿವೈವಲ್ ಸೇರಿದಂತೆ ಅಗತ್ಯ ಸೇವೆ ಒದಗಿಸಲು ಎಲ್ಐಸಿ ಕಚೇ-ರಿಗೆ ಗ್ರಾಹಕರನ್ನು ಕರೆದುಕೊಂಡು ಬರುವಂತಾಗಿದ್ದು, ಎಲ್ಐಸಿ ಕೇಂದ್ರ ಸಂಸ್ಥೆ ಮತ್ತು ಕೇಂದ್ರ ಸರ್ಕಾರ ಕೂಡಲೇ ಸೂಪರ್ ಸೇಲ್ ಸಾಥಿ ಯಾಪ್ ಸೇ-ರಿದಂತೆ ಖಾಸಗಿ ಯಾಪ್ ಗಳನ್ನು ಪುನಃ ಸರಳೀಕರಣಗೊಳಿಸಿ ಆನ್ಲೈನ್ ಮೂಲಕ ದೊರಕುವಂತೆ ಮಾಡಬೇಕು ಎಂದು ಆಗ್ರಹಿಸಿ ಎಲ್ಐಸಿ ಪ್ರತಿನಿಧಿಗಳ ಸಂಘ(ಲಿಖೈ) ಪ್ರತಿನಿಧಿಗಳು ದೇಶ ವ್ಯಾಪಿಯಾಗಿ ಬುಧವಾರ ಎಲ್ಐಸಿ ಕಚೇರಿಗಳ ಮುಂದೆ ಕೇಂದ್ರ ಸರ್ಕಾರ ಮತ್ತು ಎಲ್ಐಸಿ ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿ ಮನವಿ ಪತ್ರವನ್ನು ಸಲ್ಲಿಸಿದರು.

ಗಂಗಾವತಿಯ ಎಲ್ಐಸಿ ಶಾಖಾ ಕಚೇರಿ ಎದುರು ಸ್ಥಳೀಯ ಲಿಖೈ ಸಂಘಟನೆಯ ಪದಾಧಿಕಾರಿಗಳು ಸಹ ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಲಿಖೈ ಸಂಘಟನೆಯ ವಿಭಾಗೀಯ ಖಜಾಂಚಿ ವಲಿಮೋಹಿಯುದ್ದಿನ್, ಅಧ್ಯಕ್ಷ ಕೆ. ಎಂ.ಮಂಜುನಾಥ, ಕಾರ್ಯದರ್ಶಿ ಹುಸೇನಬಾಷಾ ಜಾಲಹಳ್ಳಿ, ಕೆ.ನಿಂಗಜ್ಜ, ಎಂ.ನಿರುಪಾದಿ ಬೆಣಕಲ್, ಹುಸೇನಬಾಷಾ ಎಸ್.ಕೆ.ಎಚ್.ಈಶ್ವರ,ಶಂಕ್ರಪ್ಪ ಗೆದ್ದಿಕೇರಿ, ರಾಘವೇಂದ್ರ ದೇಸಾಯಿ, ಆಂಜಿನಪ್ಪ ಕರಿಗೌಡ,ಪಂಪಣ್ಣ ಪಟ್ಟಣಶೆಟ್ಟಿ, ವೀರನಗೌಡ, ಬಸವರಾಜ ಸಜ್ಜನ್, ಭಾರತಿ ಆಗಲೂರು, ಕೆ.ವರಲಕ್ಷ್ಮಿ, ಖಾಜವಲಿ, ಶ್ರೀನಿವಾಸ ಕುಲಕರ್ಣಿ, ದುರ್ಗಾಪ್ರಸಾದ, ಸಿದ್ದಾಪೂರ ರಾಘವೇಂದ್ರ ಸೇರಿದಂತೆ ಅನೇಕ ಪ್ರತಿನಿಧಿಗಳಿದ್ದರು.

# ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕರಿಂದ ಭೂಮಿ ಪೂಜೆ



**ದಿ ಹಂಪಿ ವರ್ಲ್ಡ್ ನ್ಯೂಸ್**

**ರಾಯಚೂರು:** ಮಹರ್ಷಿ ವಾಲ್ಮೀಕಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಶ್ರೀ ಬಸನಗೌಡ ದದ್ದಲ್ ಅವರು ಜೂ. 24ರಂದು ಮಾಮಡದೊಡ್ಡಿ ಗ್ರಾಮಕ್ಕೆ ಭೇಟಿ ನೀಡಿ 5054 ಯೋಜನೆಯಡಿ ಮಾಮಡದೊಡ್ಡಿಯಿಂದ ತಿಮ್ಮಪ್ಪ ಗುಡಿಯವರೆಗೆ ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು.

1 ಕೋಟಿ 50 ಲಕ್ಷ ರೂ ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಯಿಂದ ಕೊರವಿಹಾಳ ಗ್ರಾಮದಲ್ಲಿ ಅಒಖಆಅ ಯೋಜನೆಯಡಿ ಕೊರವಿಹಾಳದಿಂದ ಗಂಜಳ್ಳಿ ರಸ್ತೆ ಅಭಿವೃದ್ಧಿಗೆ ಚಾಲನೆ, 3 ಕೋಟಿ ರೂ ಲೋಕೋಪಯೋಗಿ ಇಲಾಖೆ ಶಿವವಿಲಾಸನಗರ ಗ್ರಾಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಮಂಟಪ್ಪ ಭೂಮಿ ಪೂಜೆ ನೆರವೇರಿಸಿದರು. ಸಗಮಕುಂಟಾ ಗ್ರಾಮದಲ್ಲಿ ಸಗಮಕುಂಟಾದಿಂದ ಗಂಜಳ್ಳಿ ಗ್ರಾಮದವರೆಗೆ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು. 1ಕೋಟಿ 50 ಲಕ್ಷ ರೂ ಪಂಚಾಯತ್ ರಾಜ್ ಇಲಾಖೆ ಮಾಡಮಾನದೊಡ್ಡಿ ಗ್ರಾಮದಲ್ಲಿ ಖಿಖಕ ಯೋಜನೆಯಡಿ ವಾಲ್ಮೀಕಿ ಭವನ ನಿರ್ಮಾಣ ಭೂಮಿ ಪೂಜೆ ಓಪಿ ಇಲಾಖೆ ದೇವರ ದರ್ಶನ ಪಡೆದರು: ಜೂ. 24ರಂದು ಗ್ರಾಮೀಣ ಪ್ರವಾಸ ಕೈಗೊಂಡ ವೇಳೆಯಲ್ಲಿ ಶಾಸಕರು, ಶ್ರೀ ಲಕ್ಷ್ಮೀ ರಂಗನಾಥ ದೇವಸ್ಥಾನ ಹಾಗೂ ಶ್ರೀ ದತ್ತಾತ್ರೇಯ ದರ್ಶನಾಶೀರ್ವದ ಪಡೆದರು. ಈ ಸಂದರ್ಭದಲ್ಲಿ ಊರಿನ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಹಿರಿಯ ಮುಖಂಡರು, ನಾಮನಿರ್ದೇಶಿತ ಸದಸ್ಯರು, ಅಧಿಕಾರಿಗಳು, ಕಾರ್ಯಕರ್ತರು ಗ್ರಾಮಸ್ಥರು ಉಪಸ್ಥಿತರಿದ್ದರು.

# ಗ್ರಾಮೀಣ ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸುವಂತೆ ಒತ್ತಾಯ

**ದಿ ಹಂಪಿ ವರ್ಲ್ಡ್ ನ್ಯೂಸ್**

**ಹರಪನಹಳ್ಳಿ:** ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ ಹಾಗೂ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿ ಎಸ್ಎಫ್ಐ ಸಂಘಟನೆ ಕಾರ್ಯಕರ್ತರು ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಹಾಗೂ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಸ್ಎಫ್ಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವರೆಡ್ಡಿ ಮಾತನಾಡಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಸಂಚಾರಕ್ಕೆ ಸಾರಿಗೆ ಬಸ್‌ಗಳೇ ಜೀವನಾಡಿಯಾಗಿದ್ದು ಸರಿಯಾದ ಸಮಯಕ್ಕೆ ಬಸ್ ಬರದಿದ್ದರೆ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ



ತೊಂದರೆಯಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಾಲೂಕಿನ ಎಲ್ಲಾ ಗ್ರಾಮೀಣ ಪ್ರದೇಶಗಳಿಂದ ಸರಿಸುಮಾರು 7, ಸಾವಿರಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡುಲು ನಗರಕ್ಕೆ ಬರುತ್ತಾರೆ, ಆದರೆ ಬಸ್ ವ್ಯವಸ್ಥೆ ಇಲ್ಲದ ಕಾರಣಕ್ಕೆ ತಮ್ಮ ಶೈಕ್ಷಣಿಕ ಭವಿಷ್ಯವನ್ನು ಅಥ-ರ್ಕ್ಕೆ ನಿಲ್ಲಿಸಿದ್ದಾರೆ, ಈ ಕುರಿತು ಸಾರಿಗೆ ಇಲಾಖೆಗೆ ಬಸ್ ಬಿಡುವಂತೆ ಹಲವಾರು ಬಾರಿ ಮನವಿ ಸಲ್ಲಿಸಿದರು. ಮನವಿಗೆ ಸ್ಪಂಧಿಸದೆ ನಿರ್ಲಕ್ಷ್ಯತನ ವಹಿಸಿರುವುದು ಅತ್ಯಂತ ಖಂಡನಿಯ ಎಂದರು. ವಸತಿ ನಿಲಯಗಳು ತಮ್ಮ ಆಯ್ಕೆ ಪಟ್ಟಿ ಪ್ರಕಟಿಸಲು ಹಿಂದೇಟು ಹಾಕುತ್ತಿದೆ ಕೂಡಲೇ ತನ್ನ ಪಟ್ಟಿಯನ್ನು ಪ್ರಕಟಿಸಿ ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳ ಸೌಲಭ್ಯಗಳು ಕೂಡಲೇ ನೀಡಬೇಕು ಎಂದು ಅವರು ಒತ್ತಾಯಿಸಿದರು. ಎಸ್ಎಫ್ಐ ತಾಲೂಕು ಸಂಚಾಲಕ ಮಲ್ಲಿಕಾರ್ಜುನ, ಮತ್ತು ತಾಲೂಕು ಸಹ ಸಂಚಾಲಕ ಸಂಜುನಾಯ್ಕ ಮಾತನಾಡಿ ನಮ್ಮ ಬೇಡಿಕೆಗಳಿಗೆ ಅಧಿಕಾರಿಗಳು ಸ್ಪಂದಿಸದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ಹರಪನಹಳ್ಳಿ ಬಂದ್ ಮಾಡಿ ಹೋರಾಟಕ್ಕೆ ಮುಂದಾಗುತ್ತೇವೆ ಎಂದರು. ಪ್ರತಿಭಟನೆಯಲ್ಲಿ ಗಣೇಶ್, ಗೌತಮಿ, ಮಂಗಳಮ್ಮ, ಪ್ರಿಯಾ, ಸುಜಾತ, ಮೋಹನ್, ಕಿರಣ್, ಬಸವರಾಜ್, ಸಂ-ಜಯ್, ಕೃಷ್ಣ, ವಿಜಯಕುಮಾರ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಭಾರತೀಯ ಸೈನ್ಯದ ಅಗ್ನಿ ವೀರನಾಗಿ ನೇಮಕ



**ದಿ ಹಂಪಿ ವರ್ಲ್ಡ್ ನ್ಯೂಸ್**

**ಕೊಟ್ಟೂರು:** ಕೊಟ್ಟೂರು ತಾಲೂಕು ಹೊಸಕೋಡಿಹಳ್ಳಿ ಗ್ರಾಮದಲ್ಲಿ ವಾಸಿಸುತ್ತಿರುವ ವಂಕಟೇಶ್ ಗೀತಮ್ಮ ಕಾರಿಗನೂರು, ದಂಪತಿಗಳ ಮಗನಾದ ಆಕಾಶ್ ಕೆ. ವಿ. ಇವರು ತನ್ನ ಹುಟ್ಟೂರಾದ ಕಾರಿಗನೂರನ್ನು ಬಿಟ್ಟು ಬಂದು, ತನ್ನ ಅಜ್ಜಿಯ ಊರಾದ ಕೊಟ್ಟೂರು ತಾಲೂಕು ಹೊಸಕೋಡಿಹಳ್ಳಿಯಲ್ಲಿ ಇರುವ ಅಜ್ಜಿಯ ಮನೆಯಲ್ಲಿ ವಾಸವಾಗಿದ್ದುಕೊಂಡು ಸ್ಥಳಿಯ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿ ಒಂದರಿಂದ ಎಂಟನೆಯ ತರಗತಿಯ ವರೆಗೆ ವಿದ್ಯಭ್ಯಾಸ ಮುಗಿಸಿದ ನಂತರ ತಮ್ಮ ಹಳ್ಳಿಯ ಪಕ್ಕದಲ್ಲಿ ಇರುವ ರಾಂಪುರ ಗ್ರಾಮದಲ್ಲಿ ಒಂಬತ್ತನೇ ತರಗತಿಯಿಂದ ಹತ್ತನೇ ತರಗತಿಯ ವರೆಗೆ ಶ್ರೀ ಬಸವೇಶ್ವರ ಪ್ರೌಢಶಾಲೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ತನ್ನ ವಿದ್ಯಭ್ಯಾಸವನ್ನು ಮುಗಿಸಿದನು, ಮುಂದಿನ ವಿದ್ಯಭ್ಯಾಸಕ್ಕೆಂದು ತಯಾರಿ ನಡೆಸುವ ಸಂದರ್ಭದಲ್ಲಿ ಭಾರತೀಯ ಸೇನೆಯ ಸೈನಿಕರ ಹುದ್ದೆಗೆ ಅರ್ಜಿ ಕರೆದಾಗ ಅದನ್ನು ಗಮನಿಸಿದ ಆಕಾಶ್ ಅರ್ಜಿಯನ್ನು ಭರ್ತಿ ಮಾಡಿ ಕಳುಹಿಸಿದ ನಂತರ ಸಿಇಟಿ ಮತ್ತು ಸೈನಿಕರ ಭರ್ತಿಗೆ ಬೇಕಾಗುವ ಎಲ್ಲಾ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವ ಆಕಾಶನಿಗೆ ಭಾರತೀಯ ಸೇನೆಯಲ್ಲಿ ಸೈನಿಕನಾಗಿ ಸೇವೆ ಸಲ್ಲಿಸುವ ಅವಕಾಶ ಕೂಡಿ ಬಂದಿದೆ, ಆತನು ಕಂಡಿದ್ದ ಕನಸು ಕೂಡಾ ನನಸಾಯಿತು, ಭಾರತೀಯ ಸೇನೆಯ ಅಗ್ನಿವೀರನಾಗಿ ನೇಮಕಗೊಂಡಿರುವುದನ್ನು ಕಂಡ ಬಂಧುಗಳು ತನ್ನ ಗೆಳೆಯರು ಮತ್ತು ಊರಿನ ಗುರುಹಿರಿಯರು ಆತನಿಗೆ ಸನ್ಮಾನಿಸುವುದರ ಮೂಲಕ ಸಂತಸ ವ್ಯಕ್ತ ಪಡಿಸಿದರು.

# ಶ್ರೀ ವಾಲ್ಮೀಕಿ ಕಲಾ ಸೇವಾ ರಾಷ್ಟ್ರೀಯ ಬಾಲ ಪ್ರತಿಭೆ ಪ್ರಶಸ್ತಿಗೆ ಹೆಚ್ ಶ್ರೀರಕ್ಷ ಆಯ್ಕೆ

**ದಿ ಹಂಪಿ ವರ್ಲ್ಡ್ ನ್ಯೂಸ್**

**ಹಗರಿಬೊಮ್ಮನಹಳ್ಳಿ:** ಶ್ರೀ ವಾಲ್ಮೀಕಿ ಮಹಿಳಾ ಕಲಾ ಸಂಸ್ಥೆ (ರಿ) ಹೊಸಪೇಟೆ ವಿಜಯನಗರ ಜಿಲ್ಲೆ ಇದರಲ್ಲಿ ಸಂಸ್ಥೆಯ ಅಧ್ಯಕ್ಷರಾದ "ಅನುರಾಧ ವಾಲ್ಮೀಕಿ"ಹೊಸಪೇಟೆ ಇವರು 13ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿ ಸಮಾರಂಭವನ್ನು ಹಮ್ಮಿಕೊಂಡಿದ್ದು "ಹಗರಿಬೊಮ್ಮನಹಳ್ಳಿ"ಯ ರಾಮನಗರದ ಶ್ರೀಯುತ "ಹಿಟ್ನಾಳ್ ಶ್ರೀನಿವಾಸ ಧರ್ಮ ಪತ್ನಿ ಶ್ರೀದೇವಿ" ಇವರ ಮುದ್ದಾದ ಮಗಳೇ "ಹೆಚ್ ಶ್ರೀರಕ್ಷ" ಪ್ರಸಿದ್ಧಿ ಸ್ಕೂಲಿನಲ್ಲಿ ಮೂರನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು ಕರಾಟೆ ಹಾಗೂ ಭರತನಾಟ್ಯದಲ್ಲಿ ಪ್ರವೀಣತೆ ಹೊಂದಿದ ಈ ಮುದ್ದಾದ ಮಗುವಿನ ಪ್ರತಿಭೆಯನ್ನು ಗುರುತಿಸಿ ಶ್ರೀ ವಾಲ್ಮೀಕಿ ಕಲಾ ಸೇವಾ ರಾಷ್ಟ್ರೀಯ ಬಾಲ ಪ್ರತಿಭೆ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕುಮಾರಿ "ಶ್ರೀರಕ್ಷ" ಒಂದನೇ ತರಗತಿಯಲ್ಲಿಯೇ ಪ್ರಸಿದ್ಧಿ ಸ್ಕೂಲಿನಲ್ಲಿ ಪ್ರಪ್ರಥಮವಾಗಿ 10 ಅಡಿ ಎತ್ತರದ "ಮಲ್ಲಗಂಬ"ವನ್ನು ಏರಿದ ಮುದ್ದು ಕುಮಾರಿ ಶ್ರೀರಕ್ಷ. ಕರಾಟೆ ಶಿಕ್ಷಕರಾದ ಅಲಬೂರು ನಾಗರಾಜ ಸರ್ ಹಾಗೂ ಕಿರಣ್ ಸರ್ ಗೂ ಹಾಗೂ ಭರತನಾಟ್ಯ ಶಿಕ್ಷಕಿ ಅಂಬಿಕ ಮೇಡಂಗು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾದ ಶ್ರೀ ರಕ್ಷಳಿಗೆ ಕುಟುಂಬ ವರ್ಗ ಹಾಗೂ ಪ್ರಸಿದ್ಧಿ ಸ್ಕೂಲಿನ ಶಿಕ್ಷಕರು ಹಾಗೂ ಆಡಳಿತ ಮಂಡಳಿಯವರು ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ.

# ನೇರ ನಗದು ವರ್ಗಾವಣೆ ಹಾಗೂ ಸ್ಮಾರ್ಟ್ ಮೀಟರ್ ಅಳವಡಿಕೆ ಸಂಪೂರ್ಣ ರೈತ ವಿರೋಧಿ ಕಾರ್ಯಕ್ರಮ




**ದಿ ಹಂಪಿ ವರ್ಲ್ಡ್ ನ್ಯೂಸ್**

**ಹಗರಿಬೊಮ್ಮನಹಳ್ಳಿ:** ಇತ್ತೀಚಿನ ದಿನಗಳಲ್ಲಿ ಈ ದೇಶದ ಬೃಹತ್ ಕಂಪನಿಯಾದ ಟಾಟಾ ಕಂಪನಿಗೆ ವಿದ್ಯುತ್ ಇಲಾಖೆಯನ್ನು ಖಾಸಗಿಯವರಿಗೆ ಕೊಡುವುದರ ಮೂಲಕ ರಾಜ್ಯದ ರೈತರಿಗೆ ಸರಕಾರವು ಘನಘೋರ ಅನ್ಯಾಯವನ್ನು ಮಾಡುತ್ತಿದೆ, ಖಾಸಗಿ ಕಂಪನಿಗಳಲ್ಲಿ ಉದ್ಯೋಗಿಗಳಿಗೆ ಯಾವುದೇ ರೀತಿಯ ಭದ್ರತೆ ಇರುವುದಿಲ್ಲ, ಅವರಿಗೆ ಯಾವುದೇ ರೀತಿಯ ಸೌಲಭ್ಯಗಳು ಇರುವುದಿಲ್ಲ. ಉದ್ಯೋಗಿಗಳ ಪಾಡು ಈ ರೀತಿಯಾದರೆ, ರೈತರ ಪಾಡನ್ನಂತೂ ಯಾರೂ ಕೇಳುವವರಿಲ್ಲ ಎಂದು ತಾಲೂಕು ಸಿ ಐ ಟಿ ಯು ನ ಮುಖ್ಯಸ್ಥ ಜಗನ್ನಾಥ ಕಿಡಿಕಾರಿದರು.

ಅವರು ಪಟ್ಟಣದ ಕೆಪಿಟಿಸಿ-ಎಲ್ ಕಚೇರಿಯ ಮುಂಭಾಗ ಪ್ರತಿಭಟನೆಯಲ್ಲಿ ಮಾತನಾಡುತ್ತಿದ್ದರು.ಮುಂದಿನ ದಿನಮಾನಗಳಲ್ಲಿ ರೈತರ ಬದುಕು ಮತ್ತಷ್ಟು ಘೋರವಾಗಲಿದ್ದು, ಈ ದೇಶದ ರೈತನನ್ನು ಕಾಯುವವರು ಯಾರು...? ಎಂಬ ಕಟು ಸತ್ಯ ಜನರನ್ನು ಕಾಡುತ್ತಿದೆ. ಎಲ್ಲಾ ಇಲಾಖೆಗಳನ್ನು ಇದೇ ರೀತಿಯಾಗಿ ಖಾಸಗಿಕರಣ ಮಾಡುತ್ತಾ ಹೋದಲ್ಲಿ, ಸಾರ್ವಜನಿಕ ಆಸ್ತಿಪಾಸ್ತಿಗಳು ಸಾರ್ವಜನಿಕ ಜೀವನ ಎಲ್ಲವೂ ಖಾಸಗಿ ಮಯವಾಗಿ, ಮನುಷ್ಯನ ಬದುಕು ಶೋಷಿತರ ಕೈಗೆ ಸಿಕ್ಕು ವಿಲವಿಲ ಎಂದು ಒದ್ದಾಡುವ ಪರಿಸ್ಥಿತಿ ಬರುವ ದಿನಗಳು ದೂರವಿಲ್ಲ. ಆದ್ದರಿಂದ ಆಳುವ ಸರ್ಕಾರಗಳು ಕೂಡಲೇ ಎಚ್ಚೆತ್ತುಕೊಂಡು ಜೆಸ್ಕಾಂ, ಎಸ್ಕಾಂ, ಮೆಸ್ಕಾಂಗಳಲ್ಲಿ ರಾಜ್ಯಾದ್ಯಂತ ಇರುವ ಎಲ್ಲಾ ರೀತಿಯ ವಿದ್ಯುತ್ ಇಲಾಖೆಗಳಲ್ಲಿ ಕೆಲಸ ಮಾಡುವ ನೌಕರರ ಹಾಗೂ ನಮ್ಮ ರಾಜ್ಯದಲ್ಲಿರುವ 40 ಲಕ್ಷಕ್ಕೂ ಹೆಚ್ಚು ಇರುವ ಪಂಪ್ಸೆಟ್ಟುಗಳ ರೈತರ ಹಿತವನ್ನು ಕಾಪಾಡುವ ಜವಾಬ್ದಾರಿ ಸರಕಾರಗಳ ಮೇಲಿದೆ.

ಇಲ್ಲದೆ ಹೋದಲ್ಲಿ ಮುಂದಿನ ದಿನಮಾನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಂಡು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಬೃಹತ್ ಪ್ರತಿಭಟನೆಯನ್ನು ಮಾಡಲಿದ್ದೇವೆ ಎಂದು ಸಿ ಐ ಟಿ ಪದಾಧಿಕಾರಿಗಳು ತಮ್ಮ ಹಕ್ಕು ಒತ್ತಾಯ ಮಾಡಿದರು.

ಈ ಸಂದರ್ಭದಲ್ಲಿ ಕೆಪಿಟಿಸಿಎಲ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ನಾಗರಾಜ್ ಸಿಪಿಐ ಆರ್ ಎಸ್ ಬಸವರಾಜ್ ಕೆಇಬಿ ಉದ್ಯೋಗಿಗಳು ಹಾಗೂ ಸಿಐಟಿಯು ಪದಾಧಿಕಾ-ರಿಗಳು ಉಪಸ್ಥಿತರಿದ್ದರು.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101. Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101. email: janashreetimes@gmail.com